ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue:07 ಸಂಚಿಕೆ: 07 | Date: 09-01-2026 Friday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಅರಸು ದಾಖಲೆ ಮುರಿದ ಸಿದ್ದರಾಮಯ್ಯ ಸಾಧನೆ ಏನು?

ಅಲ್ಪಸಂಖ್ಯಾತರ ತುಷ್ಟೀಕರಣವೇ ಸಾಧನೆ: ಶಾಸಕ ಸುರೇಶ್‌ಗೌಡ ಟೀಕೆ



ತುಮಕೂರು: ದೇವರಾಜ ಅರಸು ಅವರು ಒಬ್ಬ ಮುತ್ಸದ್ದಿ. ಅವರು ಮುಖ್ಯ ಮಂತ್ರಿಯಾಗಿ ಕೆಲಸ ಮಾಡಿ ಸಾಧನೆ ಮಾಡಿದ್ದಾರೆ, ಆದರೆ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವುದರಲ್ಲಿ ಸಾಧನೆ ಮಾಡಿದ್ದಾರೆ ಎಂದು ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ಸುರೇಶ್‌ಗೌಡರು ಟೀಕಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ನಾಡುಕಂಡ ಶ್ರೇಷ್ಠ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಆಡಳಿತದ ದಿನಗಳ ದಾಖಲೆ ಮುರಿದಿದ್ದಾರೆ. ಸಿದ್ದರಾಮಯ್ಯ ಅವರು ಅರಸು ಅವರು ಅಧಿಕಾರದಲ್ಲಿ ಇದ್ದ 2,789 ದಿನಗಳಿಗಿಂತ ಒಂದು ದಿನ ಹೆಚ್ಚಿಗೆ ಅಂದರೆ 2,790 ದಿನ ಅಧಿಕಾರದಲ್ಲಿ ಇದ್ದಾರೆ. ನೀವು ಅಧಿಕಾರದಲ್ಲಿ ಎಷ್ಟು ದಿನ ಇದ್ದಿರಿ ಎನ್ನುವುದು ಮುಖ್ಯವಲ್ಲ. ಇದ್ದ ದಿನಗಳಲ್ಲಿ ಜನರಿಗಾಗಿ ಏನು ಮಾಡಿದಿರಿ ಎಂದು ಪ್ರಶ್ನಿಸಿದರು.

ಇತಿಹಾಸದ ಪುಟಗಳಲ್ಲಿ ಅರಸು ಅವರು ಅಜರಾಮರವಾಗಿ ಉಳಿದಿದ್ದಾರೆ. ಸಿದ್ದರಾಮಯ್ಯ ಅವರು ಯಾವಕಾರಣಕ್ಕಾಗಿ ಇತಿಹಾಸದಲ್ಲಿ ಉಳಿಯಬೇಕು ಎಂದು ಇತಿಹಾಸವೇ ಕೇಳುತ್ತಿದೆ. ಪಕ್ಷದ ಅಧ್ಯಕ್ಷನಾಗಿ ದುಡಿದು ಅದನ್ನು ಅಧಿಕಾರಕ್ಕೆ ತಂದು ಮುಖ್ಯ ಮಂತ್ರಿಯಾಗುವುದು ನೈತಿಕ ಅಧಿಕಾರ. ಅದು ಕೂಲಿ ಮಾಡಿ ಸಂಬಳ ಕೇಳಿದಂತೆ. ಸಿದ್ದರಾಮಯ್ಯನವರು ಎರಡು ಸಾರಿ ಮುಖ್ಯ ಮಂತ್ರಿಯಾದರು. ಮೊದಲನೆಯ ಸಾರಿ 2013 ರಲ್ಲಿ ಈ ಹುದ್ದೆಗೆ ನ್ಯಾಯವಾಗಿ ಬರಬೇಕಿದ್ದ, ಆಗ ಪಕ್ಷದ ಅಧ್ಯಕ್ಷರಾಗಿದ್ದ ಡಾ.ಜಿ. ಪರಮೇಶ್ವರ್ ಅವರನ್ನು ಕೊರಟಗೆರೆಯಲ್ಲಿ ಸೋಲಿಸಿ ಅವರು ಅಧಿಕಾರಕ್ಕೆ ಬರುವುದನ್ನೇ ತಪ್ಪಿಸಿದರು. ಕೊನೆಯ ವರೆಗೂ ಅವರನ್ನು ಕನಿಷ್ಠ ಉಪಮುಖ್ಯಮಂತ್ರಿಯೂ ಮಾಡಲಿಲ್ಲ. ಎರಡನೇ ಸಾರಿ (2023) ಪಕ್ಷದ ಅಧ್ಯಕ್ಷರಾಗಿ ಇದ್ದವರು ಡಿ.ಕೆ. ಶಿವಕುಮಾರ್. ಅವರು ಸಾವಿರಾರು ಕೋಟಿರೂಪಾಯಿ ಖರ್ಚು ಮಾಡಿ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಿಕೊಂಡು ಬಂದರೆ ಸಿದ್ದರಾಮಯ್ಯ ತಾವು ಬಂದು ಮುಖ್ಯಮಂತ್ರಿಯಲ್ಲಿ ಖುರ್ಚಿಯಲ್ಲಿ ಕುಳಿತು ಕೊಂಡರು. ಇದು ಯಾವ ನೈತಿಕ ರಾಜಕಾರಣ ಎಂಬುದನ್ನು ಜನರೇ ತೀರ್ಮಾನಿಸಬೇಕು ಎಂದರು.

ಅರಸು ಅವರು ಹಿಂದುಳಿದ ವರ್ಗಗಳ ಏಳಿಗೆಗಾಗಿ ನಿಜವಾಗಿ ಶ್ರಮಿಸಿದವರು. ಅದಕ್ಕಾಗಿ ಅವರು ತಮ್ಮ ಜಾತಿಯವರಲ್ಲದ ಎಲ್.ಜಿ. ಹಾವನೂರು ಅವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ನೇಮಿಸಿ ಅವರು ಕೊಟ್ಟ ವರದಿಯನ್ನು ಬಲಿಷ್ಠ ಸಮುದಾಯಗಳ ವಿರೋಧದ ನಡುವೆಯೂ ಜಾರಿಗೊಳಿಸಿದರು. ಮುಂದೆ ಇದು ಯಾರಿಗೂ ಸಾಧ್ಯವಾಗಲಿಲ್ಲ. ಅದಕ್ಕಾಗಿ ಇಂದು ಅರಸು ಅವರು ಹಿಂದುಳಿದ ವರ್ಗಗಳ ಜನರ ಜೀವನದ ದೊಡ್ಡ ಆಶಾಕಿರಣ ಎನಿಸಿದ್ದಾರೆ. ಸಿದ್ದರಾಮಯ್ಯನವರು ತಮ್ಮದೇ ಸಮುದಾಯದ ಎಚ್.ಕಾಂತರಾಜು ಅವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಸಮೀಕ್ಷೆಗೆ ಆಯೋಗ ನೇಮಿಸಿದರು. ಅದಕ್ಕಾಗಿ ಜನರ ತೆರಿಗೆಯ 180 ಕೋಟಿ ರೂಪಾಯಿಗಳನ್ನು ವ್ಯಯ ಮಾಡಿದರು. ಕಾಂತರಾಜು ಕೊಟ್ಟ ವರದಿಯ ಮೇಲೆ ಇವರೇ ಹತ್ತು ವರ್ಷ ಕುಳಿತುಕೊಂಡರು. ಅದನ್ನು ಜಾರಿಗೊಳಿಸಲಿಲ್ಲ ಎಂದು ಬೇರೆಯವರ ವಿರುದ್ಧ ದೂರಿದರು.

ಅರಸು ಅವರ ಬದ್ಧತೆ ಎಲ್ಲಿ? ಸಿದ್ದರಾಮಯ್ಯನವರ ಆಷಾಢಭೂತಿತನ ಎಲ್ಲಿ? ಎತ್ತಣ ಮಾಮರ! ಎತ್ತಣ ಕೋಗಿಲೆ? ಅರಸು ಅವರದು ನಿಸ್ವಾರ್ಥ ರಾಜಕಾರಣ. ಸಿದ್ದರಾಮಯ್ಯನವರದು ಪರಮ ಸ್ವಾರ್ಥದ ರಾಜಕಾರಣ. ಅವರು ಯಾವಾಗಲೂ ರಾಜಕಾರಣ ಇರುವುದು ಸಿದ್ದರಾಮಯ್ಯನವರಿಗಾಗಿ, ಸಿದ್ದರಾಮಯ್ಯನವರದು ಮತ್ತು ಸಿದ್ದರಾಮಯ್ಯನವರಿಂದ ಎಂದು ತಿಳಿಯುತ್ತಾರೆ. ಅದರಂತೆಯೇ ನಡೆದುಕೊಳ್ಳುತ್ತಾರೆ. ರಾಜಕಾರಣ ಹೀಗೆ ವ್ಯಕ್ತಿ ಕೇಂದ್ರಿತ ಆಗಿರಬಾರದು. ಅದು ಜನಕೇಂದ್ರಿತ ಆಗಿರಬೇಕು. ಅರಸು ಅವರು ಮಾಡಿದ್ದು ಜನ ಕೇಂದ್ರಿತ ರಾಜಕಾರಣ. ಅದಕ್ಕಾಗಿಯೇ ಅವರು ಭೂ ಸುಧಾರಣೆ ತಂದರು. ಅಲ್ಲಿಯೂ ಅವರು ಬಲಿಷ್ಠ ವರ್ಗಗಳನ್ನು ಎದುರು ಹಾಕಿಕೊಂಡು ಅವರ ಜಮೀನು ವಶಪಡಿಸಿಕೊಂಡು ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ತಂದು ಅನೇಕ ಬಡವರು, ದಲಿತರು, ಕೂಲಿಕಾರರು ಭೂಮಿಯ ಒಡೆಯರು ಆಗುವಂತೆ ಮಾಡಿದರು. ಸಿದ್ದರಾಮಯ್ಯನವರು ಅದೇ ಬಡವರ ನಿವೇಶನಗಳನ್ನು ತಮ್ಮ ಹೆಂಡತಿಯ ಹೆಸರಿಗೆ ಬರೆಸಿಕೊಂಡರು. ಅರಸು ಅವರು ತಲೆ ಮೇಲೆ ಮಲ ಹೊರುವ ಪದ್ಧತಿಯನ್ನು ನಿವಾರಿಸಿ ಆ ಕೆಲಸ ಮಾಡುತ್ತಿದ್ದ ಭಂಗಿ ಕುಟುಂಬಗಳಿಗೆ ಘನತೆ ತಂದು ಕೊಟ್ಟರು ಎಂದು ಸುರೇಶ್‌ಗೌಡ ಹೇಳಿದರು.



ನಾಲ್ಕ ನೇ ಪುಟಕ್ಕೆ

ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಿ: ಇಒ ದೊಡ್ಡಸಿದ್ದಯ್ಯ



ತುಮಕೂರ ಬೇಸಿಗೆಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಾಸ ಉಂಟಾಗದಂತೆ ಗ್ರಾಮ ಪಂಚಾಯತಿಗಳು ಗಮನಹರಿಸಬೇಕು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದೊಡ್ಡಸಿದ್ದಯ್ಯ ಸೂಚಿಸಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 27 ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್, ನೀರು ವಿತರಕರ ಪ್ರಗತಿ ಪರಿಶೀಲನೆ ವೇಳೆ ಮಾತನಾಡುತ್ತಾ, ಕಡ್ಡಾಯವಾಗಿ ಕುಡಿಯುವ ನೀರನ್ನು ಪರೀಕ್ಷೆ ಮಾಡಬೇಕು, ನೀರಿನ ಮೂಲಗಳ ಸ್ಥಳಗಳಲ್ಲಿ ಅಂದರೆ ವಾಟರ್ ಟ್ಯಾಂಕ್, ಬೀದಿ ನಲ್ಲಿ ಸುತ್ತಾ ಬೆಳೆದಿರುವ ಗಿಡಗಂಟಿ ಸ್ವಚ್ಛಗೊಳಿಸುವುದು, ಬೀದಿ ನಾಯಿಗಳ ನಿರ್ವಹಣೆಗೆ ವರ್ಗ 1ರಲ್ಲಿ 2% ಹಣವನ್ನು ಮೀಸಲಿಡುವುದು, ಇದರ ಜೊತೆಗೆ ಕಂದಾಯ ವಸೂಲಾತಿ ಆಂದೋಲನವನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಹಮ್ಮಿಕೊಂಡು ಹೆಚ್ಚಿನ ವಸೂಲಾತಿಗೆ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳುವುದು, ಬಿಲ್ ಕಲೆಕ್ಟರ್‌ಗಳು ವಸೂಲಾತಿ ಮಾಡಿದ ಹಣವನ್ನು ಆ ದಿನವೇ ಬ್ಯಾಂಕ್‌ಗೆ ಜಮಾ ಮಾಡಿ ರಿಮಿಟೆನ್ಸ್ ಹಣವನ್ನು ತಪ್ಪದೇ ಡೇ ಬುಕ್‌ನಲ್ಲಿ ನಮೂದಿಸುವುದು. ಈ ಬಗ್ಗೆ ಕಾರ್ಯದರ್ಶಿಗಳು ಪರಿಶೀಲನೆ ನಡೆಸಬೇಕು. ಗ್ರಾಮಾಂತರ ಪ್ರದೇಶದಲ್ಲಿ ಅನುಪಯುಕ್ತ ಕೊಳವೆ ಬಾವಿಗಳನ್ನು ಪತ್ತೆಹಚ್ಚಿ ಮುಚ್ಚುವುದು, ಜಾತ್ರೆ/ದಾಸೋಹಗಳಲ್ಲಿ ನೀರಿನ ನಿರ್ವಹಣೆ ಬಗ್ಗೆ ಹಾಗೂ ಚಿರತೆ ದಾಳಿ ಜಾಗ್ರತೆ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ತಾಲ್ಲೂಕು ಪಂಚಾಯತಿ ವ್ಯವಸ್ಥಾಪಕ ಬಸವರಾಜು, ವಿಷಯ ನಿರ್ವಾಹಕರು ಉಪಸ್ಥಿತರಿದ್ದರು.

ಯುವ ಜನರಿಗೆ ಸ್ಫೂರ್ತಿಯಾಗಲಿದೆ ಕರ್ನಾಟಕ ಕ್ರೀಡಾಕೂಟ–ಸಚಿವ ಡಾ: ಜಿ. ಪರಮೇಶ್ವರ್

ತುಮಕೂರು: ತುಮಕೂರು ನಗರದಲ್ಲಿ 2026 ಜನವರಿ 16 ರಿಂದ 22ರವರೆಗೆ ಕರ್ನಾಟಕ ಕ್ರೀಡಾಕೂಟ 2025–26 ನಡೆಯಲಿದೆ. ತುಮಕೂರು ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಒಲಿಂಪಿಕ್ಸ್ ಸಂಸ್ಥೆ ಸಹಯೋಗದಲ್ಲಿ ನಡೆಯುತ್ತಿರುವ ಈ ಕ್ರೀಡಾಕೂಟ ತುಮಕೂರು ಇತಿಹಾಸದಲ್ಲೇ ಮೊದಲ ಬಾರಿಗೆ ಆಯೋಜಿಸಲಾಗುತ್ತಿದೆ. ಜಿಲ್ಲೆಯ ಯುವ ಜನರಿಗೆ ಇದು ಸ್ಫೂರ್ತಿಯಾಗಲಿದೆ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಹೇಳಿದ್ದಾರೆ.

ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಕ್ರೀಡಾಕೂಟದಲ್ಲಿ ಭಾಗವಹಿಸುವಂತೆ ಅಧಿಕೃತ ಪತ್ರ ಬರೆದಿರುವ ಅವರು, ಈ ಕ್ರೀಡಾಕೂಟದಲ್ಲಿ ವಿವಿಧ 27 ಕ್ರೀಡೆಗಳು ನಡೆಯುತ್ತಿದ್ದು, ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರೀಡಾಪಟುಗಳು ಸೇರಿದಂತೆ ಸುಮಾರು 9,000 ಕ್ರೀಡಾಪಟುಗಳು ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕ ಒಲಿಂಪಿಕ್ ಸಂಸ್ಥೆ ಪ್ರತಿ ವರ್ಷ ಒಂದೊಂದು ಜಿಲ್ಲೆಯಲ್ಲಿ ಕರ್ನಾಟಕ ಕ್ರೀಡಾಕೂಟವನ್ನು ಆಯೋಜಿಸುತ್ತಾ ಬಂದಿದ್ದು, ಪ್ರಸಕ್ತ ಸಾಲಿನ ಕ್ರೀಡಾಕೂಟದ ಆತಿಥ್ಯ ವಹಿಸುವ ಅವಕಾಶವನ್ನು ತುಮಕೂರು ಜಿಲ್ಲೆಗೆ ನೀಡಿರುವುದು ನಮ್ಮೆಲ್ಲ ತುಮಕೂರು ಜಿಲ್ಲೆಯ ಕ್ರೀಡಾಸಕ್ತರಿಗೆ ಹಾಗೂ ನಾಗರಿಕರಿಗೆ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದ್ದಾರೆ.

ಕೃಷಿ, ತೋಟಗಾರಿಕೆ, ಕೈಗಾರಿಕೆ, ಶಿಕ್ಷಣ, ಪ್ರವಾಸೋದ್ಯಮ ಸೇರಿದಂತೆ ವಿವಿಧ ವಿಷಯಗಳಲ್ಲಿ ಸದಾ ಕ್ರಿಯಾಶೀಲವಾಗಿರುವ ತುಮಕೂರು ಕ್ರೀಡೆಯಲ್ಲೂ ಎಂದೂ ಹಿಂದೆಬಿದ್ದಿಲ್ಲ. ತುಮಕೂರು ಜಿಲ್ಲೆಯ ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ಜಿಲ್ಲೆಗೆ ಕೀರ್ತಿ ತಂದಿರುವುದು ಹೊಸತೇನಲ್ಲ. ಅಂತೆಯೇ, ಮುಂದಿನ ಪೀಳಿಗೆಗೆ ಕ್ರೀಡಾಸಕ್ತಿಯನ್ನು ಬೆಳೆಸುವುದು, ಕ್ರೀಡೆಗಳಿಗೆ ಹೆಚ್ಚಿನ ಅವಕಾಶಗಳನ್ನು ಸಿಗುವಂತೆ ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

2030ರ ಕಾಮನ್ ವೆಲ್ತ್ ಕ್ರೀಡಾಕೂಟ ಭಾರತದಲ್ಲಿ ನಡೆಯುತ್ತಿದೆ ಎಂಬುದು ಸಂತಸದ ವಿಷಯ. ಅಂತೆಯೇ, 2036ರ ಒಲಿಂಪಿಕ್ ಕ್ರೀಡಾಕೂಟಕ್ಕೂ ಭಾರತ ಆತಿಥ್ಯ ವಹಿಸುವ ಎಲ್ಲಾ ಸಾಧ್ಯತೆಗಳೂ ಇರುವ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯ ಯುವ ಸಮುದಾಯವನ್ನು ಕ್ರೀಡೆಗಳಿಗೆ ಪ್ರೋತ್ಸಾಹಿಸುವ ಅಗತ್ಯವಿದೆ. ಇದಕ್ಕೆ ಪೂರಕವಾಗಿ ಇದೇ ಜನವರಿ 16 ರಿಂದ 22ರವರೆಗೆ ನಡೆಯಲಿರುವ ಕರ್ನಾಟಕ ಕ್ರೀಡಾಕೂಟ ಸ್ಫೂರ್ತಿಯಾಗಲಿದೆ ಎಂದು ಹೇಳಿದ್ದಾರೆ.



ಜನವರಿ 16 ರಿಂದ 22ರವರೆಗೆ ನಡೆಯಲಿರುವ ಕರ್ನಾಟಕ ಕ್ರೀಡಾಕೂಟವು ತುಮಕೂರು ನಗರದ ವಿವಿಧ ಸ್ಥಳಗಳಲ್ಲಿ ನಡೆಯಲಿವೆ. ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಬಾಕ್ಸಿಂಗ್, ಕೆನೋಯಿಂಗ್ ಮತ್ತು ಕಯಾಕಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹ್ಯಾಂಡ್‌ಬಾಲ್, ಜೂಡೋ, ಕಬಡ್ಡಿ, ಖೋ–ಖೋ, ಲಾನ್ ಟೆನ್ನಿಸ್, ನೆಟ್‌ಬಾಲ್, ಟೇಬಲ್ ಟೆನ್ನಿಸ್, ಟೇಕ್ವಾಂಡೊ, ವಾಲಿಬಾಲ್, ವೇಯ್ಟ್‌ಲಿಫ್ಟಿಂಗ್, ರಸ್ಲಿಂಗ್, ಊಷೂ ಕ್ರೀಡೆಗಳು ವಿವಿಧ ಅಂಕಣಗಳಲ್ಲಿ ನಡೆಯಲಿದ್ದು, ಈ ಎಲ್ಲಾ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಾವೂ ಕ್ರೀಡಾಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಈ ಮೂಲಕ ರಾಜ್ಯ, ದೇಶಕ್ಕೆ ಕೀರ್ತಿ ತರಬೇಕು ಎಂದು ಅವರು ಆಶಿಸಿದ್ದಾರೆ.

ಬಳ್ಳಾರಿ ಪ್ರಕರಣವನ್ನು ಸಿಬಿಐಗೆ ವಹಿಸುವ ಅಗತ್ಯತೆ ಇಲ್ಲ

ಬಳ್ಳಾರಿ ಘಟನೆಯ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ. ಪ್ರಕರಣವನ್ನು ತನಿಖೆ ಮಾಡುವ ಸಾಮಾರ್ಥ್ಯ ನಮ್ಮ ಪೊಲೀಸರಿಗೆ ಇದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪೊಲೀಸರಿಗೆ ತನಿಖೆ ಮಾಡಲು ಆಗುವುದಿಲ್ಲ ಎಂಬ ಸಂದರ್ಭ ಬಂದರೆ ಸಿಬಿಐಗೆ ನೀಡುವ ಬಗ್ಗೆ ಮಾತನಾಡಬಹುದು. ಈಗಾಗಲೇ ಯಾವುದೇ ಪ್ರಕರಣಗಳನ್ನು ಸಿಬಿಐಗೆ ನೀಡುವುದಿಲ್ಲ ಎಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಲಾಗಿದೆ. ಸಿಬಿಐಗೆ ಕೊಡುವ ಅಗತ್ಯತೆಯೂ ಇಲ್ಲ ಎಂದು ಹೇಳಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಅವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು. ಕೇಂದ್ರದಲ್ಲಿ ಬೃಹತ್ ಕೈಗಾರಿಕೆ ಸಚಿವರಾಗಿದ್ದಾರೆ. ನನ್ನ ಬಗ್ಗೆ ವೈಯಕ್ತಿಕವಾಗಿ ಹೇಳಿಕೆ ಕೊಟ್ಟಿದ್ದಾರೆ. ನಾನು ಅವರ ಬಗ್ಗೆ ನಾನು ಏನು ಬೇಕಾದರೂ ಮಾತನಾಡಬಹುದು. ಅವರು ಬಹಳ ಜವಾಬ್ದಾರಿಯುತವಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದು ಭಾವಿಸುತ್ತೇನೆ. ಅದನ್ನು ಸ್ವೀಕಾರ ಮಾಡುತ್ತೇನೆ ಎಂದು. ರಾಜ್ಯದಲ್ಲಿ ಕಾನೂನು ವ್ಯವಸ್ಥೆಯನ್ನು ಯಾವ ರೀತಿ ಆಡಳಿತ ಮಾಡಬೇಕು ಎಂಬ ಅರಿವು ನನಗಿದೆ ಎಂದು ಅವರಿಗೆ ಹೇಳಬಯಸುತ್ತೇನೆ. 38 ವರ್ಷ ರಾಜಕಾರಣದಲ್ಲಿದ್ದೇನೆ. ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ. ಕುಮಾರಸ್ವಾಮಿಯವರ ಜೊತೆಗೂ ಕೆಲಸ ಮಾಡಿದ್ದೇನೆ. ಹಾಗಾಗಿ ನನ್ನ ಸಾಮಾರ್ಥ್ಯ ಮತ್ತು ವ್ಯಕ್ತಿತ್ವನೂ ಅವರಿಗೆ ಗೊತ್ತಿದೆ. ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು.

ಜಿ ರಾಮ್ ಜಿ ಅಪ ಪ್ರಚಾರ: ಕಾಂಗ್ರೆಸ್ ಸರ್ಕಾರದ ವಿರುದ್ಧ ಡಾ.ಅಶ್ವತ್ಥನಾರಾಯಣ್ ಕಿಡಿ



ತುಮಕೂರು: ಉದ್ಯೋಗ ಸೃಷ್ಟಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ದೀರ್ಘ ಕಾಲದ ಸೌಕರ್ಯಗಳನ್ನು ಒದಗಿಸುವ ಗುರಿ ಹೊಂದಿರುವ ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ವಿಬಿ –ಜಿ ರಾಮ್ ಜಿ) ಯೋಜನೆ ಬಗ್ಗೆ ಕಾಂಗ್ರೆಸ್ ಸರ್ಕಾರ ಅಪಪ್ರಚಾರ ಮಾಡುತ್ತಾ ಜನರನ್ನು ದಿಕ್ಕತಪ್ಪಿಸುವ ಕೆಲಸ ಮಾಡುತ್ತಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ, ಬಿಜೆಪಿ ನಾಯಕ ಡಾ.ಸಿ.ಅಶ್ವತ್ಥನಾರಾಯಣ ಆರೋಪಿಸಿದರು.

ಗುರುವಾರ ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2006ರಲ್ಲಿ ಪ್ರಾರಂಭವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು 20 ವರ್ಷದ ನಂತರ ಅದರ ಲೋಪದೋಷಗಳನ್ನು ಸರಿಪಡಿಸಿ, ಜಿ ರಾಮ್ ಜಿ ಹೆಸರಿನಲ್ಲಿ ಹೊಸ ಸ್ವರೂಪದಲ್ಲಿ ಜನಪರವಾದ ಗ್ರಾಮೀಣ ಮೂಲಭೂತ ಸೌಕರ್ಯ, ಆಸ್ತಿ ನಿರ್ಮಾಣ, ಮೌಲ್ಯವರ್ಧನೆಗಾಗಿ ಜಾರಿಗೆ ತರಲಾಗುತ್ತಿದೆ. ಆದರೆ ರಾಜ್ಯ ಕಾಂಗ್ರೆಸ್ ಸರ್ಕಾರದ ಮುಖಂಡರು ಈ ಯೋಜನೆ ಬಗ್ಗೆ ಜನರಲ್ಲಿ ತಪ್ಪು ಭಾವನೆ ಬಿತ್ತುತ್ತಿದ್ದಾರೆ ಎಂದು ಟೀಕಿಸಿದರು.

ನ್ಯೂನ್ಯತೆ ಸರಿಪಡಿಸಿ ಯೋಜನೆಯನ್ನು ಉತ್ತಮಪಡಿಸಿ ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾಗಿ ನೀರಿನ ಕೊರತೆ ನೀಗಿಸುವ ಕೆಲಸಗಳು, ಮೂಲಸೌಕರ್ಯಗಳು, ದೈನಂದಿನ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ ಪ್ರಕೃತಿ ವಿಕೋಪಗಳನ್ನು ತಗ್ಗಿಸುವ ಕ್ರಮಗಳ ಜಾರಿಗೆ ಜಿ ರಾಮ್ ಜಿ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೈಗೊಳ್ಳುವ ಈ ಯೋಜನೆಯಲ್ಲಿ 60:40ರ ಅನುಪಾತದಲ್ಲಿ ಕೇಂದ್ರ ಸರ್ಕಾರದ ಶೇಕಡ 60 ಹಾಗು ರಾಜ್ಯ ಸರ್ಕಾರದ ಶೇಕಡ 40ರಷ್ಟು ಅನುದಾನ ಭರಿಸಬೇಕಾಗಿದೆ ಎಂದರು. ಕೇಂದ್ರ ಸರ್ಕಾರ ಮಂಡಿಸಿರುವ ಈ ಮಸೂದೆಯಲ್ಲಿ ವರ್ಷದಲ್ಲಿ 100 ದಿನಗಳ ಕೆಲಸದ ಅವಧಿಯನ್ನು 125 ದಿನಕ್ಕೆ ಹೆಚ್ಚಿಸಲಾಗಿದೆ. ಮನರೇಗಾದಲ್ಲಿ ಕೇಂದ್ರ ಸರ್ಕಾರ ಶೇಕಡ 100ರಷ್ಟು ಜತೆಗೆ ಶೇಕಡ 75ರಷ್ಟು ಸಾಮಗ್ರಿಗಳ ವೆಚ್ಚವನ್ನು ಭರಿಸುತ್ತಿತ್ತು. ರಾಜ್ಯ ಸರ್ಕಾರ ಕೇವಲ ನಿರುದ್ಯೋಗ ಭತ್ಯೆ ಮತ್ತು ಶೇಕಡ ಕಚ್ಚಾ ವಸ್ತುಗಳ ವೆಚ್ಚವನ್ನು ಭರಿಸುತ್ತಿತ್ತು. ಜಿ ರಾಮ್ ಜೀ ಯೋಜನೆಯಲ್ಲಿ ವೇತನ ಮತ್ತು ಸಾಮಗ್ರಿಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 60:40 ಅನುಪಾತದಲ್ಲಿ ವೆಚ್ಚ ಭರಿಸಬೇಕು ಎಂದು ಡಾ.ಅಶ್ವತ್ಥನಾರಾಯಣ ಹೇಳಿದರು.

ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ, ಆಸ್ತಿ ನಿರ್ಮಾಣ, ಮೌಲ್ಯವರ್ಧನೆಗೆ ಆದ್ಯತೆ ನೀಡುವ ಈ ಯೋಜನೆ ಬಗ್ಗೆ ಕಾಂಗ್ರೆಸ್ ನಾಯಕರು ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಖಂಡಿಸಿದ ಅವರು, ಈ ಯೋಜನೆಯ ಮಹತ್ವ ಹಾಗೂ ಉಪಯೋಗದ ಬಗ್ಗೆ ಬಿಜೆಪಿ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.


ಶಾಸಕರಾದ ಜಿ.ಬಿ.ಜ್ಯೋತಿಗಣೇಶ್, ಬಿ.ಸುರೇಶ್‌ಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಚ್.ಎಸ್.ರವಿಶಂಕರ್ ಹೆಬ್ಬಾಕ, ಜಿಲ್ಲಾ ಹಿರಿಯ ಉಪಾಧ್ಯಕ್ಷ ವೈ.ಹೆಚ್.ಹುಚ್ಚಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಗಂಗರಾಜು, ಸಂದೀಪ್ ಗೌಡ, ಜಿಲ್ಲಾ ಕಾರ್ಯದರ್ಶಿ ಹೆಚ್.ಎಂ.ರವೀಶಯ್ಯ, ನಗರ ಅಧ್ಯಕ್ಷ ಟಿ.ಕೆ.ಧನುಷ್, ಜಿಲ್ಲಾ ವಕ್ತಾರ ಟಿ.ಆರ್.ಸದಾಶಿವಯ್ಯ, ಮುಖಂಡರಾದ ಗಣೇಶ್‌ಪ್ರಸಾದ್, ರಾಜಶೇಖರ್, ಜೆ.ಜಗದೀಶ್, ಹನುಮಂತರಾಜು ಮೊದಲಾದವರು ಹಾಜರಿದ್ದರು.

ತುಮಕೂರಿನಲ್ಲಿ ನಿಗೂಢ ಸಾವು : ಸಂಪ್‌ನಲ್ಲಿ ತಾಯಿ–ಮಕ್ಕಳ ಶವ ಪತ್ತೆ: ಕಾರಣ ಏನು?

ಸಂಪ್‌ನಲ್ಲಿ ತಾಯಿ ಮತ್ತು ಇಬ್ಬರು ಮಕ್ಕಳ ಶವ ಪತ್ತೆಯಾಗಿರುವ ಘಟನೆ ತುಮಕೂರು ಜಿಲ್ಲೆಯ ಸಿಂಗನಹಳ್ಳಿಯಲ್ಲಿ ನಡೆದಿದೆ. ಮನೆಯಲ್ಲಿ ಡೆತ್ ನೋಟ್ ಸಿಕ್ಕಿದ್ದು, ಮಾನಸಿಕ ಖಿನ್ನತೆಯಿಂದ ಮಕ್ಕಳ ಜೊತೆ ತಾಯಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ಮೃತಳ ಸಹೋದರನ ದೂರಿನ ಆಧಾರದಲ್ಲಿ ತನಿಖೆ ನಡೆಯುತ್ತಿದೆ.

ಸಂಪ್‌ನಲ್ಲಿ ತಾಯಿ ಮತ್ತು ಮಕ್ಕಳ ಶವ ಪತ್ತೆಯಾಗಿರುವ ಘಟನೆ ತುಮಕೂರು ಜಿಲ್ಲೆಯ ಸಿಂಗನಹಳ್ಳಿಯಲ್ಲಿ ನಡೆದಿದೆ. ವಿಜಯಲಕ್ಷ್ಮೀ ಹಾಗೂ ಅವರ ಇಬ್ಬರು ಮಕ್ಕಳಾದ ಚೇತನ ಮತ್ತು ಚೈತನ್ಯ ಮೃತ ದುರ್ದೈವಿಗಳಾಗಿದ್ದು, ಮನೆಯಲ್ಲಿ ಡೆತ್ ನೋಟ್ ಕೂಡ ಪತ್ತೆಯಾಗಿದೆ. ಹೀಗಾಗಿ ಮಾನಸಿಕ ಖಿನ್ನತೆಯಿಂದ ಮಕ್ಕಳ ಜೊತೆ ತಾಯಿ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ವಿಜಯಲಕ್ಷ್ಮೀ ಪತಿ ಸಂಪತ್ ಖಾಸಗಿ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ಮಧ್ಯಾಹ್ನ ಅವರು ಮನೆಗೆ ಬಂದಾಗ ಪತ್ನಿ ಹಾಗೂ ಮಕ್ಕಳು ಕಾಣಿಸುತ್ತಿರಲಿಲ್ಲ. ಹೀಗಾಗಿ ಮನೆ ತುಂಬಾ ಹುಡುಕಾಡಿದ್ದಾರೆ. ಎಲ್ಲಿಯೂ ಸಿಗದಿದ್ದಾಗ ತನ್ನ ತಂದೆ ಹಾಗೂ ತಾಯಿಗೆ ಈ ವಿಚಾರ ತಿಳಿಸಿ ಮನೆಯ ಮುಂದೆ ನಿಂತಿದ್ದಾರೆ. ಈ ವೇಳೆ ಸಂಪ್ ತೆರೆದಿರೋದು ಅವರ ಕಣ್ಣಿಗೆ ಬಿದ್ದಿದೆ. ಇಣುಕಿ ನೋಡಿದಾಗ ಒಂದರನಂತರ ಒಂದರಂತೆ ಮೂರು ಶವಗಳು ಕಾಣಿಸಿವೆ. ಕೂಡಲೇ ಈ ಬಗ್ಗೆ ಕ್ಯಾತ್ಸಂದ್ರ ಪೊಲೀಸರಿಗೆ ಸಂಪತ್ ವಿಷಯ ತಿಳಿಸಿದ್ದಾರೆ ಎನ್ನಲಾಗಿದೆ.



ಮೂಲತಃ ಶಿವಗಂಗೆಯವರಾದ ಸಂಪತ್ ಕುಟುಂಬ ಕಳೆದ 30 ವರ್ಷಗಳಿಂದ ಸಿಂಗನಹಳ್ಳಿಯಲ್ಲಿ ವಾಸವಿದ್ದು, ಇತ್ತೀಚಿನ ಕೆಲ ವರ್ಷಗಳಿಂದ ಈ ಮನೆಯನ್ನು ಬಾಡಿಗೆಗೆ ಪಡೆದು ನೆಲೆಸಿದ್ದರು. ಸಂಪತ್ ಜೊತೆ ಪತ್ನಿ ವಿಜಯಲಕ್ಷ್ಮೀ, ಇಬ್ಬರು ಮಕ್ಕಳು ಹಾಗೂ ಆತನ ತಂದೆ ಹನುಮಂತರಾಜು ಮತ್ತು ತಾಯಿ ರೇಣುಕಮ್ಮ ಸಹ ವಾಸವಿದ್ದರು. ಸಂಪತ್ ಹಾಗೂ ಆತನ ತಾಯಿ ರೇಣುಕಮ್ಮ ಕೆಲಸಕ್ಕೆ ಹೋದ್ರೆ, ಇತ್ತ ವಿಜಯಲಕ್ಷ್ಮೀ ಮನೆಯಲ್ಲಿದ್ದ ಮಾವನ ಉಪಚಾರ ಮಾಡಿಕೊಂಡು ಮಕ್ಕಳ ಜೊತೆ ಇರುತಿದ್ದರು. ಆದೇ ರೀತಿ ನಿನ್ನೆ ಸಹ ಸಂಪತ್ ಹಾಗೂ ಅವರ ತಾಯಿ ಕೆಲಸಕ್ಕೆ ತೆರಳಿದ್ದಾರೆ. ಈ ನಡುವೆ ಮಾವ ಕೂಡ ಕೆಲಸವಿದೆ ಎಂದು ನೆಲಮಂಗಲಕ್ಕೆ ತೆರಳಿದ್ದಾರೆ. ಆ ಬಳಿಕ ಮನೆಯಲ್ಲಿ ಇಬ್ಬರು ಮಕ್ಕಳ ಜೊತೆ ಇದ್ದ ವಿಜಯಲಕ್ಷ್ಮೀ ನಿಗೂಢವಾಗಿ ಸಾವನಪ್ಪಿದ್ದು, ಶವ ಸಂಪ್‌ನಲ್ಲಿ ಪತ್ತೆಯಾಗಿದೆ.

ಇನ್ನು ಮನೆಯಲ್ಲಿ ಡೆತ್‌ನೋಟ್ ಕೂಡ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಹಾಗೂ ನಮ್ಮ ಸಾವಿಗೆ ಯಾರು ಕಾರಣವಲ್ಲ ಎಂದು ಅದರಲ್ಲಿ ವಿಜಯಲಕ್ಷ್ಮೀ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಕ್ಯಾತಸಂದ್ರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೇಲ್ನೋಟಕ್ಕೆ ಮಾನಸಿಕ ಖಿನ್ನತೆಯಿಂದ ವಿಜಯಲಕ್ಷ್ಮೀ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದರೂ ಮಕ್ಕಳಿಬ್ಬರ ಸಾವು ಪೊಲೀಸರಿಗೆ ಗೊಂದಲ ಸೃಷ್ಟಿಸಿದೆ. ಹೀಗಾಗಿ ಮೃತಳ



ಮುಂದಿನ ಭವಿಷ್ಯಕ್ಕಾಗಿ ನದಿಗಳ ಜೋಡಣೆಯ ಲಾಭ ನಷ್ಟಗಳು ಹೀಗೊಂದು ವಿಶ್ಲೇಷಣೆ

ಮೇಲ್ನೋಟಕ್ಕೆ ಅಭಿವೃದ್ಧಿಯ ದೃಷ್ಟಿಯಿಂದ ಅನಿವಾರ್ಯ ಎನಿಸಬಹುದು, ಆದರೆ ದೀರ್ಘಕಾಲದ ಪರಿಣಾಮಗಳು ಮಾತ್ರ ಆಘಾತಕಾರಿ ....ಸಾಮಾನ್ಯ ಮನುಷ್ಯರ ತಿಳುವಳಿಕೆಗೆ ನಿಲುಕದ ವಿಷಯ ವೆಂದರೆ " ನದಿಗಳ ಜೋಡಣೆ " ಎಂಬ ಬೃಹತ್ ಯೋಜನೆ..........ಗಂಗಾ – ಕಾವೇರಿ ಅಥವಾ ರಾಜ್ಯದ

ಬೇಡ್ತಿ – ವರದ – ಅಘನಾಶಿನಿ – ವೇದಾವತಿ ನದಿ ಜೋಡಣೆ ಅಥವಾ ಈ ರೀತಿಯ ಯಾವುದೇ ನದಿಗಳ ಜೋಡಣೆ ಇರಬಹುದು.......

ಬಹಳ ಹಿಂದಿನಿಂದಲೂ ಈ ಬಗ್ಗೆ ಚರ್ಚೆಗಳು ಆಗುತ್ತಲೇ ಇವೆ. ಚರ್ಚೆಗಳಿಗೂ ನಿಲುಕದ, ಭವಿಷ್ಯದ ಫಲಿತಾಂಶಗಳ ಬಗ್ಗೆ ಖಚಿತವಾದ ನಿರ್ಧಾರ ಸಾಧ್ಯವಿಲ್ಲದ, ಆದರೆ ಪ್ರಕೃತಿಯ ಮೇಲಿನ ಬಹುದೊಡ್ಡ ಹಲ್ಲೆಯೋ ಅಥವಾ ನಿಯಂತ್ರಣವೋ ಅಥವಾ ಸಾಧನೆಯೋ ತುಂಬಾ ಗಂಭೀರವಾಗಿ ಯೋಚಿಸಬೇಕಾದ ವಿಷಯವಿದು.........

ಕೇವಲ ಪರಿಸರ ತಜ್ಞರ ವಿರೋಧ – ನೀರಾವರಿ ತಜ್ಞರ ತಾಂತ್ರಿಕ ಸಾಮರ್ಥ್ಯ – ದೇಶಭಕ್ತರ ಉತ್ಸಾಹ – ರೈತರ ಲಾಭ – ಸರ್ಕಾರದ ಸಾಧನೆ ಎಂಬ ಅಂಶಗಳ ಮೇಲೆ ಮಾತ್ರ ಇದನ್ನು ನಿರ್ಧರಿಸಲು ಸಾಧ್ಯವಿಲ್ಲ......

ಇಡೀ ಪ್ರಕೃತಿಯ ಸಮಗ್ರ ದೃಷ್ಟಿಯಿಂದ ಇದನ್ನು ವಿಶ್ಲೇಷಿಸಬೇಕಾಗುತ್ತದೆ....... ನೀರಾವರಿ ತಜ್ಞನು, ಪರಿಸರ ತಜ್ಞನು, ಇಂಜಿನಿಯರ್ ಕೂಡ ಅಲ್ಲದ ಸಾಮಾನ್ಯನಾದ ನಾನು ಈ ಬಗ್ಗೆ ಒಂದು ಸಣ್ಣ ಅಭಿಪ್ರಾಯ ವ್ಯಕ್ತಪಡಿಸಲು ಇಚ್ಚಿಸುತ್ತೇನೆ............

ಇಡೀ ಮನುಕುಲದ ನಾಗರಿಕತೆ ಪ್ರಾರಂಭವಾಗುವುದೇ ನದಿ ತೀರದ ಪ್ರಾಂತಗಳಲ್ಲಿ. ಕಾಡುಗಳ ಅಲೆದಾಟದ ನಂತರ ಒಂದು ನಿಶ್ಚಿತ ಜಾಗದಲ್ಲಿ ವಾಸಿಸಲು ಪ್ರಾರಂಭಿಸಿದಾಗ ಆತನಿಗೆ ವ್ಯವಸಾಯದಿಂದ ಹಿಡಿದು ಎಲ್ಲಾ ದೃಷ್ಟಿಯಿಂದಲೂ ಅನುಕೂಲಕರವಾಗಿದ್ದ ಸ್ಥಳ ನದಿಯ ತೀರ – ನದಿ ಮುಖಜ ಭೂಮಿ......

ಅನಂತರ ತನ್ನ ರಕ್ಷಣೆ – ಅನುಕೂಲಗಳಿಗೆ ತಕ್ಕಂತೆ ಮನೆ, ಆಹಾರ, ಸಂಪರ್ಕ, ಆಡಳಿತ ಇತ್ಯಾದಿಗಳನ್ನು ರೂಪಿಸಿಕೊಂಡ......

ಜನಸಂಖ್ಯೆ ಬೆಳೆದಂತೆ ಹಳ್ಳಿ, ಊರು, ಪಟ್ಟಣ, ನಗರಗಳನ್ನು ನಿರ್ಮಿಸಿದ.....

ಈ ಎಲ್ಲಾ ಸಂದರ್ಭದಲ್ಲೂ ಪ್ರಕೃತಿಯ ಜೊತೆ ಅದಕ್ಕೆ ಪೂರಕವಾಗಿ ವರ್ತಿಸುತ್ತಿದ್ದ ಮತ್ತು ಅವನ ಅವಶ್ಯಕತೆಗಳು ಆ ಮಿತಿಯಲ್ಲಿಯೇ ಇದ್ದುದರಿಂದ ಪ್ರಕೃತಿಯ ವಿರುದ್ಧದ ಕೆಲವು ನಿಲುವುಗಳು ಅಷ್ಟೇನು ಹೆಚ್ಚು ಭಾದಿಸಲಿಲ್ಲ..........

ಆದರೆ ಅನಂತರ ಅತಿಯಾದ ಜನಸಂಖ್ಯೆ ಮತ್ತು ಆತನ ತೀರದ ದಾಹ ಹೆಚ್ಚಾಗಿ ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಗೆ ವಿರುದ್ಧವಾದ ಯೋಜನೆಗಳನ್ನು ಕೈಗೆತ್ತಿಕೊಂಡ.......

ಅಣೆಕಟ್ಟೆಗಳ ನಿರ್ಮಾಣ – ಜಲಾಶಯಗಳಲ್ಲಿ ನೀರು ಸಂಗ್ರಹ ಅದರ



ಮೊದಲ ಪ್ರಯೋಗ,

ಹಸಿರು ಕ್ರಾಂತಿಯ ಪರಿಣಾಮ ಕೃಷಿಯ ಅಧಿಕ ಫಸಲಿಗಾಗಿ ರಾಸಾಯನಿಕಗಳ ಸಿಂಪಡಣೆ, ಭೂಮಿಯ ಫಲವತ್ತತೆಯ ನಾಶ ಎರಡನೇ ಪ್ರಯೋಗ,

ಪರಿಸರ, ಕಾಡು, ಅಲ್ಲಿನ ಜೀವ ಜಂತುಗಳು, ಬೆಟ್ಟ ಗುಡ್ಡಗಳ ಮೇಲೆ ಆಕ್ರಮಣ ಆತನ ಮೂರನೇ ಪ್ರಯೋಗ......

ಈ ಹಿನ್ನೆಲೆಯಲ್ಲಿ ನದಿ ಜೋಡಣೆಯನ್ನು ನೋಡಬೇಕಾಗಿದೆ........

ಬಹುಶಃ ಇಂದಿನ ಭಾರತದ ನಗರೀಕರಣದ ಪ್ರಭಾವದಿಂದಾಗಿ ಬಹುತೇಕ ಜನರಿಗೆ ನದಿಗಳ ಅಗಾಧತೆಯ ಕಲ್ಪನೆಯೂ ಇರುವುದಿಲ್ಲ. ಅಮೆಜಾನ್ – ನೈಲ್ ಮುಂತಾದ ನದಿಗಳ ಆಳ, ಅಗಲ, ವಿಸ್ತೀರ್ಣ, ರಭಸ, ಹರಿಯುವ ಭಯಾನಕತೆ, ಅಡಗಿರುವ ವಿಸ್ಮಯಗಳು ಊಹೆಗೂ ನಿಲುಕದ್ದು.......

ದಕ್ಷಿಣ ಭಾರತದಲ್ಲಿ ಹರಿಯುವ ಕೃಷ್ಣಾ, ಕಾವೇರಿ, ಭೀಮಾ, ತುಂಗಾ, ಭದ್ರಾ, ಗೋದಾವರಿ, ನೇತ್ರಾವತಿ, ವೃಷಭಾವತಿ ಮುಂತಾದವುಗಳು ಆ ಅಗಾಧತೆಗೆ ಹೋಲಿಸಿದರೆ ಸಣ್ಣ ನದಿಗಳು. ಅತಿಯಾದ ಮಳೆ ಸಂದರ್ಭದಲ್ಲಿ ಬಿಟ್ಟರೆ ಅಂತಹ ಅಪಾಯಕಾರಿ ನದಿಗಳಲ್ಲ. ಈ ಹೋಲಿಕೆಯೊಡನೆ ಉತ್ತರ ಭಾರತದ ಗಂಗಾ, ಸಿಂಧೂ, ಬ್ರಹ್ಮಪುತ್ರ, ನರ್ಮದಾ ಇತ್ಯಾದಿ ನದಿಗಳನ್ನು ಹೆಚ್ಚು ಕಡಿಮೆ ಮಧ್ಯಮ ಗಾತ್ರದ ನದಿಗಳೆಂದು ಕರೆಯಬಹುದು........

ನದಿಗಳ ಸಣ್ಣ ನೀರಾವರಿ ಯೋಜನೆಯ ಉದಾಹರಣೆ ನೋಡೋಣ....... ಕರ್ನಾಟಕದ ನೇತ್ರಾವತಿ ನದಿಯ ಹೆಚ್ಚುವರಿ ನೀರನ್ನು ಚಿಕ್ಕಬಳ್ಳಾಪುರ, ಕೋಲಾರದವರೆಗೆ ಹರಿಸುವ

" ಎತ್ತಿನಹೊಳೆ " ಎಂಬ ಯೋಜನೆಯಿಂದಲೇ (ಸರಿಯೋ – ತಪ್ಪೋ ನನಗೆ ಖಚಿತವಾಗಿ ತಿಳಿದಿಲ್ಲ)

ಕಾಡು, ಭೂಮಿ, ಜೀವಸಂಕುಲದ ಮೇಲಾಗುವ ಪರಿಣಾಮ ಅತ್ಯಂತ ಗಂಭೀರ ಮತ್ತು ಅಪಾಯಕಾರಿ ಎಂದು ಹೇಳಲಾಗುತ್ತದೆ.(ಚಿಕ್ಕಬಳ್ಳಾಪುರ – ಕೋಲಾರದ ಜನರ ನೀರಿನ ಅವಶ್ಯಕತೆ ಅದಕ್ಕಿಂತ ಹೆಚ್ಚು ಮುಖ್ಯ ಎನ್ನುವುದು ನಿಜ. ಆದರೆ ಪರ್ಯಾಯ ಮಾರ್ಗಗಳು ಹುಡುಕಬೇಕಿದೆ.)

ಈ ಎತ್ತಿನ ಹೊಳೆ ಯೋಜನೆಯ ಹಲವಾರು ಪಟ್ಟು ದೊಡ್ಡ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿವೆ.

ಅಂದರೆ ಪ್ರಕೃತಿಯ ಮೇಲೆ, ಭೂಮಿಯ ಮೇಲೆ ಬೀಳಬಹುದಾದ ಒತ್ತಡ ಗಮನಿಸಿ. ಜೊತೆಗೆ ಎಲ್ಲರೂ ಅಂದಾಜಿಸಿದಂತೆ ನದಿಗಳ ಪ್ರವಾಹವನ್ನು ನಿಯಂತ್ರಿಸುವುದು ಮನುಷ್ಯ ಮಾತ್ರನಿಗೆ ಇನ್ನೂ ಅಸಾಧ್ಯವೇ ಸರಿ............

ಇಡೀ ಕಾಡುಗಳು – ಊರುಗಳು – ಸಾಕಷ್ಟು ಜನರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾರೆ. ಪ್ರಕೃತಿಯ ಶ್ರೇಷ್ಠ ಸೃಷ್ಟಿ ಜೀವಸಂಕುಲ ನಾಶವಾಗುತ್ತದೆ........

ಈಗ ಯೋಚಿಸುವ ಸರದಿ ನಮ್ಮದು.....

ಪ್ರಕೃತಿಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸುವುದು ಮತ್ತು ತಿರುಗಿಸುವುದನ್ನು ಬಿಟ್ಟು ಪ್ರಕೃತಿಯ ಮೂಲ ಆಶಯಕ್ಕೆ ಅನುಗುಣವಾಗಿ ನಾವು ಬದುಕು ರೂಪಿಸಿಕೊಳ್ಳುವುದು. ಅಂದರೆ ನೀರು ಹೇಗೆ ತನ್ನ ಗುಣಕ್ಕೆ ತಕ್ಕಂತೆ ಚಲಿಸುತ್ತದೋ ಆ ಪ್ರದೇಶದಲ್ಲಿ ನಾವು ವಾಸಿಸಬೇಕೆ ಹೊರತು ನಾವು ವಾಸಿಸುವ ಜಾಗಕ್ಕೆ ಅದನ್ನು ಕರೆದುಕೊಳ್ಳಬಾರದು. ಸಣ್ಣ ಅವಶ್ಯಕ ಮತ್ತು ಅನಿವಾರ್ಯ ಅನುಕೂಲ ಹೊರತುಪಡಿಸಿ......

ಇಲ್ಲದಿದ್ದರೆ ಆಗಲೇ ಇದರಿಂದ ನಿಜವಾದ ದುರಂತ ಪ್ರಾರಂಭವಾಗುತ್ತದೆ. ಅದಕ್ಕೆ ಬದಲಾಗಿ ಆ ಯೋಜನೆಗಳಿಗೆ ಖರ್ಚುಮಾಡಲಾಗುತ್ತದೆ ಎಂದು ಹೇಳಲಾದ ಬೃಹತ್ ಹಣಕ್ಕಿಂತ ಕಡಿಮೆ ಖರ್ಚಿನಲ್ಲಿ ಅತ್ಯಂತ ಆಧುನಿಕ ಮತ್ತು ಬೃಹತ್ ಕೆರೆಗಳನ್ನು ನಿರ್ಮಿಸಿ ರೈತರಿಗೆ ಅತ್ಯುತ್ತಮ ಮಟ್ಟದ ನೀರಾವರಿ ಸೌಕರ್ಯ ಒದಗಿಸಬಹುದಾಗಿದೆ.....

ರೈತರಲ್ಲಿ ವೈಜ್ಞಾನಿಕ ಕೃಷಿ ಪದ್ದತಿಯನ್ನು ಪ್ರೋತ್ಸಾಹಿಸಿ ನದಿ ತೀರದ ಪ್ರದೇಶಗಳಲ್ಲಿ ಮತ್ತಷ್ಟು ಕೃಷಿಯೋಗ್ಯ ಭೂಮಿಯನ್ನು ಅಭಿವೃದ್ಧಿಪಡಿಸುವುದು ಮತ್ತೊಂದು ಉತ್ತಮ ಪ್ರಯೋಗ.

ಕೊಳವೆ ಮಾರ್ಗದ ಮುಖಾಂತರ ಕಡಿಮೆ ಖರ್ಚು ಮತ್ತು ಕಡಿಮೆ ಪರಿಸರ ಹಾನಿಯ ಮೂಲಕ ನೀರನ್ನು ಪೂರೈಸುವ ಯೋಜನೆಯ ಬಗ್ಗೆ ಸಹ ಯೋಚಿಸಬಹುದು.

ಇಷ್ಟೇ ಅಲ್ಲದೇ ಇನ್ನೂ ಹಲವಾರು ಕ್ರಮಗಳನ್ನು ಕೈಗೊಳ್ಳಬಹುದು. ಪ್ರಕೃತಿಯ ಸಹಜತೆಯನ್ನು ಕಾಪಾಡುತ್ತಾ ನಾವು ಬದುಕಲು ಪ್ರಯತ್ನಿಸಬೇಕು......

ಅಭಿವೃದ್ಧಿ ಬೇಕು ಆದರೆ ಅದಕ್ಕಾಗಿ ಪರಿಸರ ಮೇಲೆ ಹಲ್ಲೆ ತುಂಬಾ ಕಡಿಮೆ ಪ್ರಮಾಣದಲ್ಲಿ ಇರಬೇಕು. ಶೋಕಿಗಾಗಿ, ಓಟಿಗಾಗಿ, ಹಣಕ್ಕಾಗಿ, ಅಧಿಕಾರಕ್ಕಾಗಿ, ಹೆಸರಿಗಾಗಿ ಪರಿಸರ ನಾಶದ ಬೇಜವಾಬ್ದಾರಿ ಯೋಜನೆಗಳನ್ನು ಯಾವ ಸರ್ಕಾರಗಳು ಮಾಡಬಾರದು.

ಇದು ನನ್ನ ಅಲ್ಪ ತಿಳುವಳಿಕೆ. ಇದರ ಬಗ್ಗೆ ಆಳವಾಗಿ ಮಾಹಿತಿ ಇದ್ದವರು ಮತ್ತಷ್ಟು ಹಂಚಿಕೊಳ್ಳಬಹುದು.

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ವಿವೇಕಾನಂದ. ಎಚ್. ಕೆ.9663750451....9844013068......

ಒಂದು ಗಝಲ್


ದೇಹವು ಹೀಗೆಯೇ ಸೊರಗಿ ಹೋಗದು ಗೆಳೆಯ
ಮನಸು ಹಾಗೆಯೇ ಕರಗಿ ಬೀಳದು ಗೆಳೆಯ
ನೀನೆಂದ ಮಾತ್ರಕ್ಕೆ ಹೃದಯ ಕೊಡಲೇ ಒಲವೆ
ವಂಚಿತ ಬದುಕು ಯಾವತ್ತೂ ಬೇಡದು ಗೆಳೆಯ
ಚಿಂತನೆ ತರುವ ದಿನವೂ ಮುನ್ನುಡಿ ತಾರದೆ
ಚಿಂತೆಯ ಜೊತೆಗೆ ಭಾವನೆ ಸೇರದು ಗೆಳೆಯ
ಜೀವನ ಯಾತ್ರೆಯ ನಡುವೆ ಪ್ರಣಯ ಕೂಡದೆ
ಸುಖವು ಹಾಡುತ ಹೋಗಲು ಕಾಡದು ಗೆಳೆಯ
ಹುಣ್ಣಿಮೆ ದಿನವೂ ಹೊಸತು ಕಾಣದೆ ಈಶಾ
ಸವಿಯ ಕಂಡಿಹ ಬಾಳದು ಚೀರದು ಗೆಳೆಯ

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಆಲೋಚನೆ ಬದಲಿಸಿಕೊಳ್ಳಿ ಇದು ಶ್ರೀಮಂತನೊಬ್ಬನ ಕತೆ

.ಆತ ಒಂದು ಶಹರದಲ್ಲಿ ವಾಸವಾಗಿದ್ದ. ಶ್ರೀಮಂತನೆಂದ ಮೇಲೆ ಹಣಕ್ಕೆಲ್ಲಿಯ ಕೊರತೆ? ಇದೇ ವಿಷಯ ಆತನಿಗೆ ಅಹಂಕಾರ ಬರುವಂತೆ ಮಾಡಿತ್ತು. ತಾನು ಏನು ಬೇಕಾದರೂ ಮಾಡಬಲ್ಲೆನೆಂಬ ಅಹಂಕಾರ ಆತನಲ್ಲಿ ಮನೆಮಾಡಿತ್ತು.

ಒಂದು ಬಾರಿ ಆತನ ಕಣ್ಣಿನಲ್ಲಿ ಇನ್‌ಫೆಕ್ಷನ್ ಆಯಿತು. ಬಹಳ ಕಣ್ಣುರಿಯಿಂದ ಬಳಲತೊಡಗಿದ. ವೈದ್ಯರ ಬಳಿ ಹೋದ. ಆದರೆ ಯಾವ ವೈದ್ಯರಿಗೂ ಅದನ್ನು ಗುಣಪಡಿಸಲಾಗಲಿಲ್ಲ. ಆತನ ಬಳಿ ಬಹಳಷ್ಟು ಹಣವಿತ್ತು. ಆತ ದೇಶವಿದೇಶಗಳಿಂದ ಅನೇಕ ವೈದ್ಯರನ್ನು ಕರೆಸಿಕೊಂಡ. ಕೊನೆಗೆ ಒಬ್ಬ ಹಿರಿಯ ವೈದ್ಯರು ಅವನ ರೋಗದ ಲಕ್ಷಣ ಕಂಡುಹಿಡಿದರು. "ನಿಮ್ಮ ಕಣ್ಣಿಗೆ ಅಲರ್ಜಿ ಇದೆ. ನೀವು ಕೆಲವು ದಿನಗಳವರೆಗೆ ಹಸಿರು ಬಣ್ಣವನ್ನು ಮಾತ್ರ ನೋಡುತ್ತಿರಬೇಕು. ಬೇರೆ ಯಾವುದೇ ಬಣ್ಣವನ್ನು ನೋಡಿದರೂ ಕಣ್ಣಿಗೆ ತೊಂದರೆಯಾಗುತ್ತದೆ" ಎಂದು ಎಚ್ಚರಿಕೆ ನೀಡಿದರು. ಇಷ್ಟಾದ ನಂತರ ಏನು ಮಾಡುವುದೆಂದು ಶ್ರೀಮಂತ ಯೋಚಿಸಿದ. ತಕ್ಷಣವೇ ಊರಲ್ಲಿರುವ ದೊಡ್ಡ ದೊಡ್ಡ ಪೇಂಟರ್ ಗಳಿಗೆ ಕರೆ ಕಳುಹಿಸಿದ. ತನ್ನ ಇಡೀ ಬಂಗಲೆಗೆ ಹಸಿರು ಬಣ್ಣ ಬಳಿಯುವಂತೆ ಸೂಚಿಸಿದ. "ನನಗೆ ಹಸಿರು ಬಣ್ಣದ ಹೊರತಾಗಿ ಬೇರೇನೂ ಕಾಣಬಾರದು. ನಾನು ತಿರುಗಾಡುವ ಜಾಗದಲ್ಲೆಲ್ಲ ಇದೇ ಬಣ್ಣ ಹಚ್ಚಿ" ಎಂದು ಹೇಳಿದ. ಈ ಕಾರ್ಯಕ್ಕೆ ಬಹಳಷ್ಟು



ಹಣ ಖರ್ಚಾಗತೊಡಗಿತು. ಇಷ್ಟಾದರೂ ಶ್ರೀಮಂತನ ಕಣ್ಣಿಗೆ ಬೇರೆ ಬಣ್ಣ ಕಂಡೇ ಕಾಣುತ್ತಿತ್ತು. ಇಡೀ ಊರಿಗೆ ಬಣ್ಣ ಹಚ್ಚಿಸುವುದು ಸಾಧ್ಯವಿಲ್ಲವಲ್ಲ?

ಒಮ್ಮೆ ಆ ಊರಿನಿಂದ ಒಬ್ಬ ಸಾಧು ಹಾದುಹೋಗುತ್ತಿದ್ದರು. ಅವರು ಸುತ್ತಲೂ ಹಸಿರು ಬಣ್ಣದ ಕಟ್ಟಡಗಳನ್ನು ನೋಡಿದರು. "ಏಕೆ ಈ ರೀತಿ?" ಎಂದು ಊರವರನ್ನು ಕೇಳಿದರು. ವಿಷಯವನ್ನೆಲ್ಲ ತಿಳಿದುಕೊಂಡ ಮೇಲೆ ಅವರು ನೇರವಾಗಿ ಶ್ರೀಮಂತನ ಬಳಿ ತೆರಳಿದರು. "ಅಯ್ಯಾ, ನೀವು ಇಷ್ಟು ಹಣ ಖರ್ಚು ಮಾಡುವ ಅಗತ್ಯವೇ ಇಲ್ಲ. ನಿಮ್ಮ ಸಮಸ್ಯೆಗೆ ನನ್ನ ಬಳಿ ಪರಿಹಾರವಿದೆ. ನೀವು ಒಂದು ಹಸಿರು ಕನ್ನಡಕ ಖರೀದಿಸಿ ಧರಿಸಿಕೊಂಡರೆ ಸಾಕು, ನಿಮಗೆ ಎಲ್ಲವೂ ಹಸಿರಾಗಿ ಕಾಣುತ್ತದೆ" ಎಂದು ಹೇಳಿದರು. ಶ್ರೀಮಂತ ಬಿಟ್ಟ ಕಣ್ಣು ಬಿಟ್ಟಂತೆ ನೋಡತೊಡಗಿದ. ಅವನ ತಲೆಯಲ್ಲಿ ಈ ವಿಚಾರ ಬಂದಿರಲೇ ಇಲ್ಲ. ಆತ ಸುಖಾಸುಮ್ಮನೆ ಹಣ ಖರ್ಚು ಮಾಡುತ್ತಲೇ ಇದ್ದ. ನಮ್ಮ ಆಲೋಚನೆ ಮತ್ತು ನೋಡುವ ದೃಷ್ಟಿಕೋನಗಳು ಬಹಳಷ್ಟು ವಿಚಾರಗಳ ಮೇಲೆ ಪ್ರಭಾವ ಬೀರುತ್ತವೆ. ಅನೇಕ ಬಾರಿ ಸಮಸ್ಯೆಗಳಿಗೆ ಪರಿಹಾರ ಬಹು ಸುಲಭವಾಗಿರುತ್ತದೆ. ಆದರೆ ನಾವು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿರುತ್ತೇವೆ.

ಶ್ರೀ ರಾಜಾರಾಮ ಮಹಾರಾಜರು, 'ಸದ್ಗುರು ವಾಚೋನಿ ದುಃಖ ತೋಡವಿತಾ, ನ ದಿಸೇ ಪಾಹತಾ ತ್ರಿಭುವನಿ' ಎಂದಿದ್ದಾರೆ. ಅಂದರೆ, ನಮ್ಮೆಲ್ಲ ಸಮಸ್ಯೆಗಳಿಗೆ ಗುರು ಮಾತ್ರ ಸರಳ ಪರಿಹಾರ ಸೂಚಿಸಬಲ್ಲರು ಎಂದು ಬಣ್ಣಿಸಿದ್ದಾರೆ. ನಮಗೆ ಸಮಸ್ಯೆಗಳಿರದ ದಿನಗಳು, ಸಮಸ್ಯೆಯಾಗದ ವಿಚಾರಗಳು ಇರದು. ಎಲ್ಲರದರೊಳಗೂ ಸಮಸ್ಯೆಯನ್ನು ಹುಡುಕುವ ಸೂಕ್ಷ್ಮ (ಕುರೂಪಿ) ಮನಸ್ಸು ನಮ್ಮದು. ಸಮಸ್ಯೆಯನ್ನು ನುಂಗುತ್ತೇವೆ; ಯಾರೊಡನೆಯೂ ಹಂಚಿಕೊಳ್ಳುವುದಿಲ್ಲ. ಮನದೊಳಗೆ ಕುದಿಯುವ ಸಮಸ್ಯೆಗಳ ಸಂಖ್ಯೆ ಏರುತ್ತಿರುತ್ತವೆಯೇ ಹೊರತು ಪರಿಹಾರ ಎತ್ತಿನ ಕೋಡಿನಲ್ಲೇ ಇರುತ್ತದೆ. ಮನಸ್ಸಿನೊಳಗೆ ಬೆಳೆಯುವ ಸಮಸ್ಯೆಗಳು ನಮ್ಮ ಹೃದಯ ಸ್ಥಂಬನಕ್ಕೆ ಕಾರಣವಾದರೂ ವಿಶೇಷವಲ್ಲ. ಸಮಸ್ಯೆಗಳಿಗೆ ಆಯಾ ದಿನವೇ ಪರಿಹಾರ ಕಂಡುಕೊಳ್ಳಬೇಕು. ಅದಕ್ಕಾಗಿ ನಮ್ಮ ಸಮಸ್ಯೆಗಳನ್ನು ಇತರರಿಗೆ ಉಣ ಬಡಿಸಬೇಕು, ಅವರು ಗುರುಗಳಿರಬಹುದು, ಗೆಳೆಯರಿರಬಹುದು, ಹೆತ್ತವರು, ಸೋದರ ಸೋದರಿಯರು, ಒಡಹುಟ್ಟಿದವರು... ಹೀಗೆ ಇವರ ಮುಂದೆ ಸಮಸ್ಯೆಯನ್ನು ಮುಕ್ತವಾಗಿಟ್ಟಾಗ ಯಾರಾದರು ಒಬ್ಬರು ಸೂಕ್ತವಾದ ಪರಿಹಾರ ನೀಡಿಯೇ ನೀಡುವರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಬಸವ ಸಂಸ್ಕೃತಿ ಅಭಿಯಾನದ ಕುರಿತು ನಮ್ಮ ಮಾತು

ಸೂರ್ಯಪ್ರಗತಿ ನ್ಯೂಸ್.ಕಾಂ

"ವೀರಶೈವ ಮತ್ತು ಲಿಂಗಾಯತ" ಈ ದ್ವಂದ್ವದ ಕುರಿತು ಮಾಹಿತಿ ಇರುವ ನಮಗೆ ಅತ್ಯಂತ ಹತ್ತಿರದವರಾದ ಮಾಧ್ಯಮಬಂಧುಗಳೊಬ್ಬರು ನಮ್ಮನ್ನು ಕೇಳಿದರು,

"ಬಸವ ಸಂಸ್ಕೃತಿ ಅಭಿಯಾನ ತುಮಕೂರಿಗೆ ಬಂದಾಗ ನೀವು ಸ್ವಾಗತಿಸಲು ಹೋಗುತ್ತೀರಾ?" ಎಂದು.

"ವ್ಹೈ ನಾಟ್?!! ಅವಶ್ಯವಾಗಿ ಸ್ವಾಗತಿಸುತ್ತೇವೆ.

ಬಸವಸಂಸ್ಕೃತಿಯ ಬಗ್ಗೆ ಪ್ರೀತಿ, ಅಭಿಮಾನ, ಗೌರವ ಇರುವ ಪ್ರತಿಯೊಬ್ಬರೂ ಈ ಅಭಿಯಾನವನ್ನು ಸ್ವಾಗತಿಸಲೇಬೇಕು.

ಬಸವಸಂಸ್ಕೃತಿಯನ್ನು ಯಾರು ತಾನೆ ಇಷ್ಟಪಡುವುದಿಲ್ಲ?

ಎಲ್ಲರೂ ಇಷ್ಟಪಡುತ್ತಾರೆ. ನಾವೂ ಸಹ ಬಸವಸಂಸ್ಕೃತಿಯನ್ನು ತುಂಬ ಇಷ್ಟಪಡುತ್ತೇವೆ.

"ಇವನಾರವ ಇವನಾರವ" ಎನ್ನದೆ ಎಲ್ಲರನ್ನೂ "ಇವ ನಮ್ಮವ, ಅವ ನಮ್ಮವ" ಎಂದು ಒಪ್ಪಿಕೊಂಡು, ಅಪ್ಪಿಕೊಂಡು ಹೋಗುವ "ವಸುದೈವಕುಟುಂಬಕ" ಬಸವಸಂಸ್ಕೃತಿಯನ್ನು ಅದೇಕೆ ಇಷ್ಟಪಡಬಾರದು? ನೀವೇ ಹೇಳಿ.

"ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ – ಎಂದು ಹೇಳುವ

"ಡೌನ್ ಟು ಅರ್ಥ್" ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

"ಶಿವಪಥವನರಿವೊಡೆ ಗುರುಪಥವೇ ಮೊದಲು" ಎಂದು ಹೇಳುವ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ಹೇಳುವ ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

ಇಲ್ಲಿ "ಶಿವಪಥ" ಎಂದರೆ ಮುಕುತಿ, ಮುಕ್ತಿ ಎಂದರ್ಥ.

"ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು" ಎಂದು ಹೇಳುವ ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ" ಎಂಬ ಖಡಾಖಂಡಿತ ನೀತಿಸಂಹಿತೆಯನ್ನು ನಾಡಿಗೆ ಕೊಟ್ಟ ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

"ನಾನು ಆರಂಬವ ಮಾಡುವೆನಯ್ಯ ಗುರುಪೂಜೆಗೆಂದು;
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು;
ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು"

ಹೇಳುವ "ಗುರುಲಿಂಗಜಂಗಮಪ್ರಿಯ" ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

"ಛಲಬೇಕು ಶರಣಂಗೆ ಪರಧನವ, ಪರಸತಿಯ, ಪರದೈವವ, ಲಿಂಗಜಂಗಮವನೊಂದೆಂಬ, ಪ್ರಸಾದ ದಿಟವೆಂಬ" ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

"ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ" ಎಂದು ಬೇರೆಯವರಿಂದ "ಏನೂ ಬೇಡ" ಎಂದು ತನ್ನ ಆರಾಧ್ಯದೇವರ ಮೇಲೆ ಮತ್ತು ತನ್ನ ಪ್ರಮಥಬಾಂಧವರ ಮೇಲೆ ಆಣೆ ಇಟ್ಟುಕೊಳ್ಳುವ "ಹ್ಯಾಂಡ್‌ಕ್ಲಿಯರ್", "ಮೈಂಡ್‌ಕ್ಲಿಯರ್", "ಹ್ಯಾಂಡ್ ರಿಫ್ರೆಶರ್", "ಮೈಂಡ್‌ರಿಫ್ರೇಶರ್" ಬಸವಸಂಸ್ಕೃತಿಯನ್ನು ಯಾರು ಇಷ್ಟಪಡುವುದಿಲ್ಲ? ನೀವೇ ಹೇಳಿ.

ಅದೂ ಅಲ್ಲದೆ,

ಈ ಬಸವಸಂಸ್ಕೃತಿಯ ಅಭಿಯಾನದ ನೊಗಹೊತ್ತ ಮತ್ತು ಅಭಿಯಾನದ ಮುಂಚೂಣಿಯಲ್ಲಿರುವ ಬಹುತೇಕ ಸ್ವಾಮೀಜಿಗಳೆಲ್ಲರೂ ನಮಗೆ ತುಂಬ ಬೇಕಾದವರು.

ಎಲ್ಲರೂ ಚೆನ್ನಾಗಿ ಓದಿಕೊಂಡವರು, ಹತ್ತಾರು ಗ್ರಂಥಗಳನ್ನು ಬರೆದವರು, ಒಳ್ಳೆಯ ಚಿಂತಕರು. ಅಷ್ಟು ಮಾತ್ರವಲ್ಲ, ಎಲ್ಲರೂ ಸಹೃದಯರು.

– ಇವರೆಲ್ಲರ ಜೊತೆಯಲ್ಲಿ ನಾವು ಹಲವಾರು ಸಲ ಸೇರಿದ್ದೇವೆ, ಹಾರ್ದಿಕವಾಗಿ ಬೆರೆತಿದ್ದೇವೆ, ಪರಸ್ಪರ ಮಾತನಾಡಿದ್ದೇವೆ. ಅವರುಗಳ ಮಠದ ಕಾರ್ಯಕ್ರಮಗಳಿಗೆ ಹೋಗಿದ್ದೇವೆ. ಅವರುಗಳ ಒಡನಾಟ ನಮಗೆ ಖುಷಿ ಕೊಟ್ಟಿದೆ. ಅವರೆಲ್ಲರ ಬಗ್ಗೆ ನಮಗೆ ತುಂಬ ಗೌರವ, ಅಭಿಮಾನ, ಪ್ರೀತಿ ಇದೆ.



ಬಸವಸಂಸ್ಕೃತಿಯನ್ನು ಹರಡಲು, ಅದನ್ನು ಇನ್ನಷ್ಟು ಪಸರಿಸಲು, ಮನೆಮನೆ ತಲುಪಿಸಲು ಈ ಅಭಿಯಾನವನ್ನು ಹಮ್ಮಿಕೊಂಡಿದ್ದರೆ ತುಂಬ ತುಂಬಾನೇ ಒಳ್ಳೆಯದು. ಅಂಥೊಂದು ಸಂಸ್ಕೃತಿ ಅಭಿಯಾನದ ಅವಶ್ಯಕತೆ, ಅಗತ್ಯ ಈಗಿದೆ.

ಇನ್ನು "ವೀರಶೈವರೇ ಬೇರೆ, ಲಿಂಗಾಯತರೇ ಬೇರೆ" ಎಂದು ಸಾರುವುದಕ್ಕೆ, ಅದನ್ನೇ ಭಜನೆ ಮಾಡಿಕೊಂಡು ಹೋಗುವುದಕ್ಕೆ, ಅಧಿಕೃತವಾಗಿ ಅದನ್ನು ವಿಭಜಿಸುವುದಕ್ಕೆ ಹೊರಟಿದ್ದರೆ ನಮ್ಮಂಥ ಹದುಳ ಮನಸ್ಥಿತಿಯುಳ್ಳ ಪ್ರಜ್ಞಾವಂತ ಸ್ವಾಮೀಜಿಗಳು ಒಂದಷ್ಟು ಯೋಚಿಸಬೇಕಾಗುತ್ತದೆ.

ಸ್ವಾಮಿಗಳೇನೋ ಒಳ್ಳೆಯವರೇ!! ನಮ್ಮ ಹಾಗೆ ಅವರಿಗೂ ಬಾಹ್ಯಜಗತ್ತಿನ "ಅಂದರ್–ಬಾಹರ್"ಗಳು ಗೊತ್ತಿರುವುದಿಲ್ಲ. ಹೆಂಡತಿ, ಮಕ್ಕಳು, ಮನೆ, ಅದು, ಇದು, ಸಂಸಾರ ತೊರೆದು ತ್ಯಾಗಮಾಡಿಬಿಟ್ಟು ತ್ಯಾಗ–ಯೋಗದ ದ್ಯೋತಕವಾದ ಕಾವಿಯನ್ನು ಧರಿಸಿರುತ್ತಾರೆ.

ಈ ಕಾಲದಲ್ಲಿ ಸ್ವಾಮೀಜಿಗಳ ಹಿಂದೆಯೂ ಕಾಣದ ಕೈಗಳು ಕೆಲಸಮಾಡಿಕೊಂಡಿರುತ್ತವೆ.

ಕಾಣದ ಕೈಗಳು ಇಂಥ ಅಭಿಯಾನಗಳ ಪ್ರಾಯೋಜಕತ್ವವನ್ನು ಕೂಡ ವಹಿಸಿಕೊಂಡಿರುವ ಸಾಧ್ಯತೆ ಇರುತ್ತದೆ. "ಹಸ್ತಕ್ಷೇಪ" ಎನ್ನುವುದು ಯಾರನ್ನೂ ಬಿಟ್ಟಿಲ್ಲ. ಇವತ್ತು, ಎಲ್ಲ ರಂಗಗಳಲ್ಲೂ ಒಂದು, ಅಧಿಕೃತವಾಗಿಯೋ, ಅನಧಿಕೃತವಾಗಿಯೋ ಕಾಣದ ಕೈಗಳ "ಹಸ್ತಕ್ಷೇಪ" ಇದ್ದೇ ಇರುತ್ತದೆ.

ಬಸವಸಂಸ್ಕೃತಿ ಅಭಿಯಾನ ಈಗ ತಾನೆ ಕಲ್ಯಾಣನಾಡಿನಿಂದಮ ಶುರುವಾಗಿದೆ.

ಅಭಿಯಾನದ ಮುಂಚೂಣಿಯಲ್ಲಿರುವವರು ಕೆಲವು ವಿಷಯಗಳನ್ನು ಗಮನಿಸುವುದು ಒಳ್ಳೆಯದು.

ನಾಡಿನುದ್ದಗಲಕ್ಕೂ ಸಂಚರಿಸುವ ಈ ಅಭಿಯಾನ ಯಾರ ಮನಸ್ಸನ್ನೂ ನೋಯಿಸಬಾರದು.

ಯಾರನ್ನೋ ಅಥವಾ ಏನನ್ನೋ ಅಥವಾ ಏನೋ ಒಂದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರಿಗೆ ವಿವೇಕ ಹೆಚ್ಚು, ಇವರಿಗೆ ಅವಿವೇಕ ಹೆಚ್ಚು. ಅವರಿಗೆ ವಿವೇಕ ಕಡಿಮೆ – ಎಂಬಿತ್ಯಾದಿ "ಆಫ್ ದಿ ರಿಕಾರ್ಡ್" ಮಾತುಗಳು ಮೈ–ಮನಸ್ಸಿನ ಮಾತ್ರವಲ್ಲ, ನಾಲಿಗೆಯ ಶೀಲವನ್ನು ಕೂಡ ಕಳೆದುಹಾಕುತ್ತವೆ. ಈ ವರಸೆಯ ಮಾತುಗಳು ಅಭಿಯಾನದ ಮೌಲ್ಯ ಮತ್ತು ತೂಕವನ್ನು ಕಡಿಮೆ ಮಾಡುತ್ತವೆ.

ನಮ್ಮ ದೃಷ್ಟಿಯಲ್ಲಿ, ನಾವು ಯಾವುದೇ ಯಾತ್ರೆ, ಅಭಿಯಾನವನ್ನು ಕೈಗೊಂಡರೂ ಅವು "ಜೋಡೋ ಯಾತ್ರೆ" ಮತ್ತು "ಜೋಡೋ ಅಭಿಯಾನ"ಗಳಾಗಬೇಕು. ಅವು "ತೋಡೋ ಯಾತ್ರೆ" ಮತ್ತು "ತೋಡೋ ಅಭಿಯಾನ"ಗಳಾಗಬಾರದು.

ಇದು ನಮ್ಮ ಮನ್ ಕೀ ಬಾತ್. ನೀವು ನಮ್ಮನ್ನು ಈ ವಿಷಯದ ಕುರಿತು ಕೇಳಿದಿರೆಂದು ನಾವು ಹೇಳಿದೆವು. ಇಲ್ಲದೆ ಇದ್ದರೆ ನಾವು ಈ ವಿಷಯದಲ್ಲಿ ಮಾತನಾಡುತ್ತಿರಲಿಲ್ಲ.

ನಮಗೆ ಗೊತ್ತಿದೆ, ಈಗ ಯಾರ ಮಾತನ್ನೂ ಯಾರೂ ಕೇಳುವುದಿಲ್ಲ; ಮತ್ತು ಯಾರ ಮಾತನ್ನೂ ಯಾರೂ ಕೇಳಿಸಿಕೊಳ್ಳುವುದಿಲ್ಲ, ಸಭೆ–ಸಮಾರಂಭಗಳಲ್ಲೂ ಕೂಡ!!

ಎಲ್ಲರೂ ಈಗ "ಅಪನಾ ಅಪನಾ ಮನ್ ಕಾ ಮಾಲಿಕ್" ಮತ್ತು "ಅಪನಾ ಅಪನಾ ಮರ್ಜಿ ಕಾ ಮಾಲಿಕ್"!!

ಎಲ್ಲರೂ ಈಗ "ಅಪನಾ ಅಪನಾ" ಮತ್ತು ಎಲ್ಲರೂ ಈಗ "ಅಪನಾ ಸಪನಾ" ವರಸೆಯ ವಾರಸುದಾರರು!!

ಇದು "ಕಾಲಾಯ ತಸ್ಮೈ ನಮಃ" ಎಂದು ಹೇಳುವ ಕಾಲವಲ್ಲ; ಇದು "ಅನುಕೂಲಾಯ ತಸ್ಮೈ ನಮಃ" ಎಂದು ಹೇಳುವ ಕಾಲಘಟ್ಟ!




ಡಾ. ಶಿವಾನಂದ ಶಿವಾಚಾರ್ಯ ಶ್ರೀಗಳು
ಸುಕ್ಷೇತ್ರ ಹಿರೇಮಠ, ತಪೋವನ, ತುಮಕೂರು

ಸಿದ್ದರಾಮಯ್ಯ ದಾಖಲೆಯ ಮುಖ್ಯಮಂತ್ರಿ ಅವಧಿಗೆ ಕಾರಣಗಳಿವು

ರಾಜಕೀಯ ೦ ವಿರೋಧಿಗಳಿಗೂ ಇಷ್ಟವಾಗುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿ ಅಪರೂಪ ದ ದಾಖಲೆಯೊಂದನ್ನು ಬರೆದಿದ್ದಾರೆ. ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಅವಧಿಯನ್ನು ಮೀರಿ, ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರೆದಿದ್ದಾರೆ. ಸಿದ್ದರಾಮಯ್ಯನವರ ಈ ಅಪರೂಪದ ರಾಜಕೀಯ ಸಾಧನೆಗೆ ಹಲವು ಕಾರಣಗಳಿದ್ದು ಅದರಲ್ಲ ಅವರ ಸಮರ್ಥ ನಾಯಕತ್ವ ಮತ್ತು ಹೋರಾಟದ ಛಲ ಅತ್ಯಂತ ಪ್ರಮುಖವಾದುದು. ಸಿದ್ದರಾಮಯ್ಯನವರ ಸುದೀರ್ಘ ಅವಧಿಯ ಮುಖ್ಯಮಂತ್ರಿ.

ರಾಜ್ಯದ ದೀರ್ಘಾವಧಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಹೊಸ ಮೈಲುಗಲ್ಲು ದಾಖಲೆ ಮಾಡಿದ್ದಾರೆ. ಅವರದ್ದೆ ಒಂದು ವಿಶೇಷ ನಾಯಕತ್ವ ಮಾದರಿ. ಸುದೀರ್ಘ ಸಾರ್ವಜನಿಕ ಬದುಕಿನ ಅನುಭವದಲ್ಲಿರಾಜಕೀಯ ಸನ್ನಿವೇಶಗಳನ್ನು ನಿಭಾಯಿಸುವ ಅವರ ಛಾತಿ, ಅಪರೂಪದ ವಾಕ್ ಚಾತುರ್ಯ ವಿಶೇಷವಾಗಿ ಪ್ರತಿ ಮಾತಿನಲ್ಲಿ ವ್ಯಕ್ತವಾಗುವ ಸಾಮಾಜಿಕ ಕಳಕಳಿ ಅವರ ವ್ಯಕ್ತಿತ್ವದ ಮೆರಗು ಹೆಚ್ಚಿಸಿದೆ.

ವಿಧಾನಸಭೆ ಒಳಗೆ ಅಥವಾ ಹೊರಗೇ ಆಗಲಿ, ಸಿದ್ದರಾಮಯ್ಯ ಅವರ ಮಾತು ಸೂಜಿಗಲ್ಲಿನಂತೆ ಎಲ್ಲರ ಗಮನ ಸೆಳೆಯುತ್ತದೆ. ಅವರ ಮಾತಿನ ಧಾಟಿ, ಆಕ್ರಮಣ ಶೀಲ ಮನೋಭಾವ ಎದುರಾಳಿಗಳನ್ನು ಮಣಿಸುತ್ತವೆ. ಪಕ್ಷ ಮತ್ತು ಸರಕಾರವನ್ನು ಸಮರ್ಥನೆ ಮಾಡಿಕೊಳ್ಳುವುದರಲ್ಲೂ





ಸಿದ್ದರಾಮಯ್ಯ ಅವರು ಸಿದ್ಧಹಸ್ತರು. ಈ ವಿಚಾರದಲ್ಲಿ ಪರಿಣಿತ ಲಾಯರ್‌ನಂತೆ ಅವರು ಎತ್ತುವ ಲಾ ಪಾಯಿಂಟ್‌ಗಳು ಪ್ರತಿಪಕ್ಷಗಳನ್ನು ಕಟ್ಟಿಹಾಕುತ್ತವೆ. ತಮ್ಮ ಕೆಲಸ, ಬದ್ಧತೆ ವಿಚಾರದಲ್ಲಿ ಮಾತಿಗೆ ನಿಂತರೆ ಅವರು ಯಾವ ಮುಲಾಜಿಗೂ ಒಳಗಾಗುವುದಿಲ್ಲ. ಅವರ ಈ ಗುಣಗಳೇ ನಾಯಕತ್ವದ ಪ್ರಸ್ತುತತೆ ಹಾಗೂ ದಾಖಲೆ ಅವಧಿಯಲ್ಲಿಅವರು ಸಿಎಂ ಆಗಿ ಉಳಿಯಲು ಸಹಕಾರಿಯಾಗಿವೆ ಎಂದರೂ ತಪ್ಪಲ್ಲ.

ಶಾಸನಸಭೆ ಕಲಾಪದಲ್ಲಿ ಪ್ರತಿಪಕ್ಷ ನಾಯಕರಾಗಿ ಅಥವಾ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಮಾತಿಗೆ ನಿಂತರೆ ಎಲ್ಲರ ಗಮನ ಸೆಳೆಯುತ್ತಾರೆ. ಹಣಕಾಸು ಸಂಬಂಧಿ ವಿಚಾರಗಳಿರಲಿ, ಅಭಿವೃದ್ಧಿ ಕೆಲಸಗಳೇ ಆಗಲಿ, ಪ್ರತಿಯೊಂದು ವಿಚಾರವನ್ನೂ ಸ್ಮೃತಿಪಟಲದಿಂದ ಎಳೆಎಳೆಯಾಗಿ ಬಿಚ್ಚಿಡುವ ಹಾಗೂ ಸ್ಪಷ್ಟವಾಗಿ ಅಂಕಿ–ಅಂಶ, ದಾಖಲೆಯೊಂದಿಗೆ ಮಾತನಾಡುವ ಅವರ ಸಂಸದೀಯ ಪಟುತ್ವದ ಶೈಲಿ ಅವರಲ್ಲಿನ ನಾಯಕತ್ವ ಗುಣಕ್ಕೆ ಪ್ರಖರತೆ ತಂದುಕೊಟ್ಟಿವೆ.

ಮುಖ್ಯಮಂತ್ರಿಯಾಗಿ ತಮ್ಮ ಪ್ರತಿಯೊಂದು ಕೆಲಸಗಳಿಗೂ ಹಿನ್ನೆಲೆ ಜೊತೆಗೆ ಸಾಮಾಜಿಕ ಹಾಗೂ ವೈಯಕ್ತಿಕ ಬದುಕಿನ ಹಿನ್ನೆಲೆಯನ್ನೂ ಕಟ್ಟಿಕೊಡುವ ಸಿದ್ದರಾಮಯ್ಯ ಅವರು ಈ ಕಾರಣಕ್ಕೆ ಹಲವರಿಗೆ ಸ್ಫೂರ್ತಿಯೂ ಹೌದು. ಸಂವಿಧಾನದ ಆಶಯಗಳಿಂದ ವರ್ತಮಾನದ ಸಂದರ್ಭದವರೆಗೆ ಪ್ರತಿ ವಿಷಯದ ಬಗ್ಗೆ ವಿಶ್ಲೇಷಣಾತ್ಮಕವಾಗಿ ತಾಸುಗಟ್ಟಲೆ ಮಾತನಾಡುವ ಸಿದ್ದರಾಮಯ್ಯ ಅವರು ಕೆಲವೊಮ್ಮೆ ಸದನದಲ್ಲಿ ಶಿಕ್ಷಕರಾಗುವುದೂ ಉಂಟು.

ಗಣಿ ಅಕ್ರಮದ ವಿರುದ್ಧ ವಿಧಾನಸಭೆ ಒಳಗೆ ಹಾಗೂ ಬಳ್ಳಾರಿವರೆಗಿನ ಪಾದಯಾತ್ರೆ ಒಳಗೊಂಡು ಸಾರ್ವಜನಿಕ ಬದುಕಿನಲ್ಲಿ ನಾಡಿನ ಹಿತದ ವಿಷಯಗಳಲ್ಲಿ ಅವರು ನಡೆಸಿದ ಹೋರಾಟಗಳು, ಒಕ್ಕೂಟ ವ್ಯವಸ್ಥೆಯ ಆಶಯಕ್ಕೆ ವಿರುದ್ಧವಾದ ಕೇಂದ್ರ ಸರಕಾರದ ತೀರ್ಮಾನಗಳ ವಿರುದ್ಧ ದಿಟ್ಟ ಪ್ರತಿಭಟನೆಗಳು ಸಿದ್ದರಾಮಯ್ಯ ಅವರ ನಾಯಕತ್ವ ಗುಣದ ಮೆರಗು ಹೆಚ್ಚಿಸಿವೆ.

ಸಮೂಹ ಆಕರ್ಷಣೆ ವ್ಯಕ್ತಿತ್ವ:

ಸಿದ್ದರಾಮಯ್ಯ ಅವರು ನಾಡಿನ ಉದ್ದಗಲಕ್ಕೂ ಮನೆಮಾತು. ಎಲ್ಲ ವರ್ಗ, ಭಾಗದ ಜನರೂ ಸಿದ್ದರಾಮಯ್ಯ ಅವರನ್ನು ಮೆಚ್ಚಿಕೊಳ್ಳುತ್ತಾರೆ. ರಾಜಕೀಯ ತಂತ್ರಗಾರಿಕೆ ಹೆಣೆಯುವುದರಲ್ಲಿನಿಪುಣರಾದ ಸಿದ್ದರಾಮಯ್ಯ ಅವರು ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿಆಕರ್ಷಣೆಯ ಕೇಂದ್ರಬಿಂದುವಾಗಿರುತ್ತಾರೆ. ಕೆಲವು ಬಹಿರಂಗ ಸಭೆ ಮತ್ತು ಚುನಾವಣಾ ಪ್ರಚಾರ ಸಭೆಗಳಲ್ಲಿ ಜನರನ್ನು ಹಿಡಿದಿಟ್ಟುಕೊಳ್ಳಲು ಸಿದ್ದರಾಮಯ್ಯ ಅನಿವಾರ್ಯ ಎಂಬುದು ಸಾಬೀತಾಗಿದೆ.

ಸಿದ್ದರಾಮಯ್ಯ ಅವರ ಭಾಷಣ ಆಲಿಸಲು ಜನರು ಕೊನೆವರೆಗೂ ಕಾದಿರುತ್ತಾರೆ. ವಿಶೇಷವೆಂದರೆ ನಾಡಿನ ಉದ್ದಗಲಕ್ಕೂ ಸಿದ್ದರಾಮಯ್ಯ ಅವರನ್ನು ಮೆಚ್ಚಿಕೊಳ್ಳುವ ಅಭಿಮಾನಿಗಳ ದೊಡ್ಡ ಸಮೂಹವೇ ಇದೆ. ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಅವರ ಬದ್ಧತೆ, ರಾಜಕೀಯ ಎದುರಾಳಿಗಳು ಎಷ್ಟೆ ಪ್ರಬಲರಾಗಿದ್ದರೂ ಯಾವ ಹಿಂಜರಿಕೆಯೂ ಇಲ್ಲದೆ ದಿಟ್ಟವಾಗಿ ಎದುರಿಸುವ ಛಾತಿ ಅವರನ್ನು ಅಗ್ರಗಣ್ಯ ನಾಯಕರಾಗಿ ರೂಪಿಸಿದೆ. ಈ ನಾಯಕತ್ವ ಗುಣದ ಮೂಲಕ ದಾಖಲೆ ಅವಧಿಗೆ ಸಿಎಂ ಗಾದಿಯಲ್ಲಿ ಸಿದ್ದರಾಮಯ್ಯ ಮುಂದುವರಿಯಲು ಸಾಧ್ಯವಾಗಿದೆ.

ಗಾಂಧೀಜಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್ : ಗೋವಿಂದ ಕಾರಜೋಳ ಅವರ ಮಾರ್ಮಿಕ ನುಡಿ

ನರೇಗಾದಡಿ ವಿನೂತನ ತಂತ್ರಜ್ಞಾನ, ಪಾರದರ್ಶಕತೆ ಕಾಂಗ್ರೆಸ್ಸಿಗರಿಗೆ ದೊಡ್ಡ ಸವಾಲಾಗಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಮತ್ತು ಸಂಸದ ಗೋವಿಂದ ಕಾರಜೋಳ ಅವರು ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಭ್ರಷ್ಟಾಚಾರ ಮಾಡಿ ಖಜಾನೆಯಿಂದ ಹಣ ಎತ್ತಿಕೊಂಡು ಹೋಗುತ್ತಿದ್ದರು. ಅದು ತಪ್ಪಲಿದೆ ಎಂದರು. ಅದಕ್ಕಾಗಿ ಹೊಟ್ಟೆ ಉರಿಯಿಂದ ಹೇಳಿಕೊಳ್ಳುತ್ತಿದ್ದಾರೆ ಎಂದು ನುಡಿದರು.



ಗಾಂಧಿ ಹೆಸರನ್ನು ಅಳಿಸಿದವರು ಯಾರು ಎಂಬುದಕ್ಕೆ ಉದಾಹರಣೆಗಳನ್ನು ನೀಡಿದ ಅವರು, ರಾಜ್ಯದಲ್ಲಿ 25 ಯೋಜನೆಗಳು ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ 55 ರಾಜೀವ್ ಗಾಂಧಿ, ಇಂದಿರಾ ಗಾಂಧಿ ಹೆಸರಿನಲ್ಲಿ 21 ಮತ್ತು ನೆಹರೂ ಹೆಸರಿನಲ್ಲಿ 22 ಇವೆ ಎಂದು ತಿಳಿಸಿದರು.

ಪ್ರತಿಯೊಂದು ಕ್ರಿಡಾಕೂಟದಲ್ಲೂ ರಾಜೀವ್ ಗಾಂಧಿ, ರಾಹುಲ್ ಗಾಂಧಿ ಹೆಸರು, ಇಂದಿರಾ ಗಾಂಧಿ ಹೆಸರು ಇಟ್ಟುಕೊಂಡು ಇವರು ಜನರಿಗೆ ಮೋಸ ಮಾಡಿ ನಿಜವಾದ ಗಾಂಧಿಯನ್ನು ಮರೆತುಬಿಟ್ಟವರು ಎಂದು ಟೀಕಿಸಿದರು.

ಹೊಸದಾಗಿ ನರೇಗಾದಡಿ ಎಲ್ಲ ವರ್ಗದವರಿಗೂ ಅವಕಾಶ ಇದೆ. ಯಾರು ಬೇಕಾದರೂ ಬರಬಹುದು. ಹಾಗೆಂದು ಶ್ರೀಮಂತ ವರ್ಗದವರು ಕೂಲಿ ಕೆಲಸಕ್ಕೆ ಬರುವುದಿಲ್ಲ ಎಂದು ವಿವರಿಸಿದರು.

ಗಾಂಧೀಜಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್. ಡಾ. ಅಂಬೇಡ್ಕರರಿಗೆ ಅಪಮಾನ ಮಾಡಿದ್ದು ಕಾಂಗ್ರೆಸ್ ಪಕ್ಷ. ಅಂಬೇಡ್ಕರರು ಮೃತಪಟ್ಟಾಗ ಅವರ ಸಮಾಧಿಗೆ ಆರಡಿ ಮೂರಡಿ ಜಾಗವನ್ನೂ ಕೊಡಲಿಲ್ಲ. ಅಪಾರ ಪಾಂಡಿತ್ಯ, ಜ್ಞಾನವಿದ್ದ ಡಾ. ಅಂಬೇಡ್ಕರರಿಗೆ ಅವರ ಜೀವಿತ ಕಾಲದಲ್ಲಿ ಭಾರತರತ್ನ ಕೊಡಲಿಲ್ಲ. ಅವರ ಮನೆ ಮಂದಿಗೆಲ್ಲ ತೆಗೆದುಕೊಂಡರು. ಈ ದೇಶಕ್ಕೆ ಸಂವಿಧಾನ ಕೊಟ್ಟ ಅಂಬೇಡ್ಕರರಿಗೆ ಕೊಡಲಿಲ್ಲ ಎಂಬುದನ್ನು ನಾವು ಹೇಳಬೇಕು ಎಂದರು.


ಇವತ್ತು ನರೇಂದ್ರ ಮೋದಿಜೀ ಅವರು ತಮ ಹೆಸರನ್ನು ಒಂದೇ ಒಂದು ಸಂಸ್ಥೆಗಾಗಲೀ, ಯೋಜನೆಗಾಗಲೀ ಇಟ್ಟುಕೊಂಡಿಲ್ಲ. ಸರಕಾರದ ಹೆಸರೇ ಇದೆ ಎಂದು ವಿವರಿಸಿದರು.

5 ವಿಮಾನನಿಲ್ದಾಣ, ಬಂದರುಗಳಿಗೆ ಇಂದಿರಾಗಾಂಧಿ, ರಾಹುಲ್ ಗಾಂಧಿ, ರಾಜೀವ್ ಗಾಂಧಿ ಹೆಸರು ಇಟ್ಟುಕೊಂಡು ಕುಳಿತಿದ್ದಾರಲ್ಲವೇ? ಇವರಿಗೆ ಮಹಾತ ಗಾಂಧಿ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ? ಎಂದು ಪ್ರಶ್ನಿಸಿದರು.

ನರೇಂದ್ರ ಮೋದಿಜೀ ಅವರು ವಿಕಸಿತ ಭಾರತಕ್ಕೆ ಪೂರಕ ವಿಬಿ–ಜಿ ರಾಮ್ ಜಿ ಎಂಬ ಯೋಜನೆ ಜಾರಿಗೊಳಿಸಿ, ಭ್ರಷ್ಟಾಚಾರ ತಡೆ, ಆಸ್ತಿ ನಿರ್ಮಾಣ, ಗ್ರಾಮೀಣ ನಿಜವಾದ ಬಡವರಿಗೆ ಕೂಲಿ ಕೆಲಸ ಕೊಡಲು ಅನುಕೂಲ ಆಗುವ ಇದೊಂದು ಹೊಸ ವ್ಯವಸ್ಥೆ ತಂದಿದ್ದಾರೆ. ನರೇಗಾದಲ್ಲಿ ಯಾವುದಕ್ಕೂ ಹೊಣೆಗಾರಿಕೆ ಇರಲಿಲ್ಲ. ಇವತ್ತು ಲೆಕ್ಕ ಕೊಡಬೇಕಲ್ಲವೇ ಎಂಬುದು ಕಾಂಗ್ರೆಸ್ಸಿಗರ ಹೊಟ್ಟೆ ಉರಿ ಎಂದು ತಿಳಿಸಿದರು.

ಗಂಡಸರ ಮನಸ್ಥಿತಿ ಅರ್ಥವಾಗಲ್ಲ: ಯಾವಾಗ ರೇಪ್/ಕೊಲೆ ಮಾಡ್ತಾನೋ ಗೊತ್ತಿಲ್ಲ..

ಬೀದಿನಾಯಿಗಳು ಕಚ್ಚುವಾಗ ಅವುಗಳ ಮನಸ್ಥಿತಿ ನಮಗೆ ಅರ್ಥವಾಗೋದಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯ ವ್ಯಕ್ತಪಡಿಸಿದೆ. ಹಾಗಾಗಿ ಅವುಗಳನ್ನು ಟೆಂಟ್‌ಗಳಿಗೆ ಶಿಫ್ಟ್ ಮಾಡುವುದೇ ಸರಿ ಎಂದು ಹೇಳಿದೆ. ಸುಪ್ರೀಂ ಕೋರ್ಟ್ ಅಭಿಪ್ರಾಯಕ್ಕೆ ಅಸಮ್ಮತಿ ವ್ಯಕ್ತಪಡಿಸಿರುವ ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ, ರಸ್ತೆಯಲ್ಲಿ ತಿರುಗಾಡುವಾಗ ಪುರುಷನ ಮನಸ್ಥಿತಿ ಕೂಡ ನಮಗೆ ಅರ್ಥವಾಗೋದಿಲ್ಲ. ಆತ ಯಾವಾಗ ರೇ*ಪ್ ಮಾಡ್ತಾನೋ, ಕೊ*ಲೆ ಮಾಡ್ತಾನೋ ಗೊತ್ತಿಲ್ಲ. ಹೀಗಿರುವಾಗ ಎಲ್ಲಾ ಪುರುಷರನ್ನು ಜೈಲಿಗೆ ಹಾಕುತ್ತೀರಾ ಎಂದು ಪ್ರಶ್ನೆ ಮಾಡಿದ್ದಾರೆ.



ಬೀದಿನಾಯಿಗಳ ಹಾವಳಿ ಮತ್ತು ಅವುಗಳ ವರ್ತನೆಯ ಕುರಿತು ಸುಪ್ರೀಂಕೋರ್ಟ್ ನೀಡಿದ ಹೇಳಿಕೆಯ ವಿರುದ್ಧ ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ (ದಿವ್ಯ ಸ್ಪಂದನ) ಕಿಡಿಕಾರಿದ್ದಾರೆ. ಪ್ರಾಣಿ ಪ್ರೇಮಿಯಾಗಿರುವ ರಮ್ಯಾ, ನ್ಯಾಯಾಲಯದ ಅಭಿಪ್ರಾಯವನ್ನು ಪುರುಷರ ಮನಸ್ಥಿತಿಗೆ ಹೋಲಿಸುವ ಮೂಲಕ ಹೊಸ ಚರ್ಚೆಗೆ ನಾಂದಿ ಹಾಡಿದ್ದಾರೆ.

ಬೀದಿನಾಯಿಗಳ ಹಾವಳಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸುವ ವೇಳೆ ಸುಪ್ರೀಂಕೋರ್ಟ್, "ಬೀದಿನಾಯಿಗಳ ಮನಸ್ಥಿತಿ ಯಾವಾಗ ಹೇಗಿರುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ. ಅವು ಯಾವಾಗ ಕಚ್ಚುತ್ತವೆ ಅಥವಾ ಯಾವಾಗ ಶಾಂತವಾಗಿರುತ್ತವೆ ಎಂಬುದು ಯಾರಿಗೂ ಅರ್ಥವಾಗುವುದಿಲ್ಲ," ಎಂದು ಅಭಿಪ್ರಾಯಪಟ್ಟಿತ್ತು.

ನ್ಯಾಯಾಲಯದ ತರ್ಕ ಪ್ರಶ್ನಿಸಿದ ರಮ್ಯಾ

ನ್ಯಾಯಾಲಯದ ಈ ತರ್ಕವನ್ನು ಪ್ರಶ್ನಿಸಿರುವ ರಮ್ಯಾ, ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. "ಪುರುಷರ ಮನಸ್ಸನ್ನು ಅರ್ಥಮಾಡಿಕೊಳ್ಳಲು ಕೂಡ ಯಾರಿಗೂ ಸಾಧ್ಯವಿಲ್ಲ. ಒಬ್ಬ ಪುರುಷ ಯಾವಾಗ ಅ*ತ್ಯಾಚಾರ ಮಾಡುತ್ತಾನೋ ಅಥವಾ ಯಾವಾಗ ಕೊ*ಲೆ ಮಾಡುತ್ತಾನೋ ಎಂದು ಯಾರೂ ಮುನ್ಸೂಚನೆ ನೀಡಲು ಸಾಧ್ಯವಿಲ್ಲ. ಹಾಗಂತ ಎಲ್ಲಾ ಪುರುಷರನ್ನು ಮುನ್ನೆಚ್ಚರಿಕಾ ಕ್ರಮವಾಗಿ ಜೈಲಿಗೆ ಹಾಕಲು ಸಾಧ್ಯವೇ?" ಎಂದು ಪ್ರಶ್ನಿಸಿದ್ದಾರೆ.

ನಾಯಿಗಳ ಮನಸ್ಥಿತಿಯನ್ನು ಅರ್ಥೈಸಲಾಗದು ಎಂಬ ಕಾರಣಕ್ಕೆ ಅವುಗಳ ಮೇಲೆ ಕಠಿಣ ಕ್ರಮ ಅಥವಾ ನಕಾರಾತ್ಮಕ ಧೋರಣೆ ತಳೆಯುವುದನ್ನು ರಮ್ಯಾ ಈ ಮೂಲಕ ವಿರೋಧಿಸಿದ್ದಾರೆ. ಪ್ರಾಣಿಗಳ ಹಕ್ಕುಗಳ ಪರವಾಗಿ ಧ್ವನಿ ಎತ್ತಿರುವ ಅವರ ಈ ಪೋಸ್ಟ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಚಲನ ಮೂಡಿಸಿದೆ.

ಬೀದಿನಾಯಿಗಳ ಹಾವಳಿ ತಡೆಗಟ್ಟಲು ಎಬಿಸಿ ನಿಯಮಗಳ ಜಾರಿ ಮತ್ತು ಸಾರ್ವಜನಿಕ ಸುರಕ್ಷತೆಯ ಬಗ್ಗೆ ಸುಪ್ರೀಂಕೋರ್ಟ್ ವಿಶೇಷ ಗಮನ ಹರಿಸುತ್ತಿದೆ. "ನಾಯಿಗಳಿಗೆ ಆಹಾರ ನೀಡುವವರ ಹಕ್ಕು ಮತ್ತು ಸಾರ್ವಜನಿಕರ ಸುರಕ್ಷತೆಯ ನಡುವೆ ಸಮತೋಲನ ಇರಬೇಕು" ಎಂದು ನ್ಯಾಯಾಲಯ ಈ ಹಿಂದೆಯೂ ತಿಳಿಸಿತ್ತು.

ಚಳಿಗಾಲದಲ್ಲಿ ಮೆದುಳಿನ ದಾಳಿಯ ಅಪಾಯ ಹೆಚ್ಚು ಯಾಕೆ?

ಚಳಿಗಾಲವು ಸಾಮಾನ್ಯವಾಗಿ ಶೀತ, ಇನ್ಫ್ಲುಯೆನ್ಸ, ಕೀಲು ನೋವು ಮತ್ತು ಆಯಾಸದಂತಹ ವಿವಿಧ ರೀತಿಯ ಕಾಲೋಚಿತ ಕಾಯಿಲೆಗಳೊಂದಿಗೆ ಸಂಬಂಧ ಹೊಂದಿದೆ. ಚಳಿಗಾಲದಲ್ಲಿ ಆರಂಭಿಕ ಮೆದುಳಿನ ದಾಳಿಗಳು ಅಥವಾ ಪಾರ್ಶ್ವವಾಯುಗಳು ಸಾಕಷ್ಟು ಮಾರಕವಾಗಿವೆ ಏಕೆಂದರೆ ಅವುಗಳನ್ನು ಹೆಚ್ಚಾಗಿ ತಪ್ಪಾಗಿ ಅರ್ಥೈಸಲಾಗುತ್ತದೆ, ಕಡೆಗಣಿಸಲಾಗುತ್ತದೆ ಅಥವಾ ಶೀತ ಹವಾಮಾನದ ಮತ್ತೊಂದು ಅಡ್ಡಪರಿಣಾಮವೆಂದು ತಪ್ಪಾಗಿ ಗ್ರಹಿಸಲಾಗುತ್ತದೆ. ಆದ್ದರಿಂದ ಅವುಗಳನ್ನು ಮೌನ ಚಳಿಗಾಲದ ಪಾರ್ಶ್ವವಾಯುಗಳು ಎಂದು ಕರೆಯಲಾಗುತ್ತದೆ.

ಚಳಿಗಾಲದಲ್ಲಿ ರಕ್ತ ಹೆಪ್ಪುಗಟ್ಟು ಸಾಧ್ಯತೆ

ಶೀತ ಹವಾಮಾನವು ದೇಹದಲ್ಲಿ ಬದಲಾವಣೆಗಳನ್ನು ತರುತ್ತದೆ ಮತ್ತು ಪಾರ್ಶ್ವವಾಯು ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಇದು ಪಾರ್ಶ್ವವಾಯು ಅಪಾಯವನ್ನು ಹೆಚ್ಚಿಸುವ ರೀತಿಯಲ್ಲಿ ದೇಹದ ಮೇಲೆ ಪರಿಣಾಮ ಬೀರುತ್ತದೆ. ರಕ್ತನಾಳಗಳು ಸಂಕುಚಿತಗೊಳ್ಳುವುದರಿಂದ ದೇಹವು ಶೀತದಿಂದ ರಕ್ಷಿಸಲ್ಪಡುತ್ತದೆ, ರಕ್ತದೊತ್ತಡ ಹೆಚ್ಚಾಗಬಹುದು ಮತ್ತು ರಕ್ತ ದಪ್ಪವಾಗಬಹುದು, ಇದು ರಕ್ತ ಹೆಪ್ಪುಗಟ್ಟುವಿಕೆಯ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ

ಚಳಿಗಾಲವು ಮೆದುಳಿನ ದಾಳಿಯ ಅಪಾಯವನ್ನು ಹೇಗೆ ಹೆಚ್ಚಿಸುತ್ತದೆಚಳಿಗಾಲವು ಮೆದುಳಿನ ದಾಳಿಯ ಅಪಾಯವನ್ನು ಹೇಗೆ ಹೆಚ್ಚಿಸುತ್ತದೆ

ಚಳಿಗಾಲದಲ್ಲಿ, ದೇಹವು ತನ್ನ ಮಧ್ಯಭಾಗದ ತಾಪಮಾನವನ್ನು ಕಾಪಾಡಿಕೊಳ್ಳಲು ಹೆಚ್ಚು ಶ್ರಮಿಸುತ್ತದೆ. ರಕ್ತನಾಳಗಳು ಬೆಚ್ಚಗಿರಲು ಸಂಕುಚಿತಗೊಳ್ಳುತ್ತವೆ, ಇದು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಏಕೆಂದರೆ ಕಡಿಮೆ ಸ್ಥಳಾವಕಾಶ ಎಂದರೆ ನಾಳಗಳ ಒಳಗೆ ಹೆಚ್ಚಿನ ಒತ್ತಡ. ರಕ್ತನಾಳಗಳ ಮೇಲಿನ ಹೆಚ್ಚುವರಿ ಹೊರೆ, ವಿಶೇಷವಾಗಿ ಆರೋಗ್ಯ ಸಮಸ್ಯೆಗಳಿರುವ ವ್ಯಕ್ತಿಯಲ್ಲಿ ಹೆಪ್ಪುಗಟ್ಟುವಿಕೆಯ ರಚನೆಯನ್ನು ಹೆಚ್ಚಿಸಬಹುದು.

ಚಳಿಗಾಲದಲ್ಲಿ ಪಾರ್ಶ್ವವಾಯು ಸಂಭವಿಸಲು ಕಾರಣಗಳು ಜನರು ಸಾಮಾನ್ಯವಾಗಿ ಚಳಿಗಾಲದ ತಿಂಗಳುಗಳಲ್ಲಿ ದೈಹಿಕವಾಗಿ ಕಡಿಮೆ ಸಕ್ರಿಯರಾಗಿರುತ್ತಾರೆ, ಕಡಿಮೆ ನೀರನ್ನು ಸೇವಿಸುತ್ತಾರೆ ಮತ್ತು ಹೆಚ್ಚು ಜಡ ಮತ್ತು ಉಪ್ಪು–ಸ್ಯಾಚುರೇಟೆಡ್ ಆಹಾರವನ್ನು ಸೇವಿಸುತ್ತಾರೆ. ನಿರ್ಜಲೀಕರಣ ಮತ್ತು ದೈಹಿಕವಾಗಿ ನಿಷ್ಕ್ರಿಯರಾಗಿರುವುದು ರಕ್ತದ ದಪ್ಪವನ್ನು ಮತ್ತಷ್ಟು ಹೆಚ್ಚಿಸುತ್ತದೆ, ಇದು ರಕ್ತ ಹೆಪ್ಪುಗಟ್ಟುವಿಕೆಗೆ ಕಾರಣವಾಗುತ್ತದೆ. ಒಟ್ಟಾರೆಯಾಗಿ, ಈ ಅಂಶಗಳು ಪಾರ್ಶ್ವವಾಯು ಸಂಭವಿಸಲು ಸೂಕ್ತವಾದ ಸನ್ನಿವೇಶವನ್ನು ಸೃಷ್ಟಿಸುತ್ತವೆ.

ಚಳಿಗಾಲದಲ್ಲಿ ಮೆದುಳಿನ ದಾಳಿಯ ಲಕ್ಷಣಗಳನ್ನು ಏಕೆ ಕಡೆಗಣಿಸಲಾಗುತ್ತದೆ


ಜನರು ಈ ರೋಗಲಕ್ಷಣಗಳನ್ನು ನಿರ್ಲಕ್ಷಿಸುವುದು ಸುಲಭ. ರೋಗಿಯು ತಮ್ಮ ಮುಖ, ತೋಳು ಅಥವಾ ಕಾಲಿನಲ್ಲಿ ಮರಗಟ್ಟುವಿಕೆ ಅಥವಾ ದೌರ್ಬಲ್ಯವನ್ನು ಅನುಭವಿಸುತ್ತಿದ್ದರೆ, ಹಾಗೆಯೇ ಅಸ್ಪಷ್ಟ ಮಾತು, ಮಂದ ದೃಷ್ಟಿ, ಗೊಂದಲ ಅಥವಾ ಹಠಾತ್ ತಲೆನೋವನ್ನು ಅನುಭವಿಸುತ್ತಿದ್ದರೆ, ಇವು ರೋಗಿಗೆ ಅಥವಾ ಅವರ ಕುಟುಂಬ ಸದಸ್ಯರಿಗೆ ಆತಂಕಕಾರಿ ಸಂಕೇತಗಳಾಗಿರಬೇಕು. ನೋವು, ತಲೆತಿರುಗುವಿಕೆ, ಬಿಗಿತ ಮತ್ತು ಗೊಂದಲವು ಸಾಮಾನ್ಯವಾಗಿ ಕಡಿಮೆ ತಾಪಮಾನ, ಕಡಿಮೆ ಸೂರ್ಯನ ಬೆಳಕು ಮತ್ತು ಕಳಪೆ ನಿದ್ರೆಯೊಂದಿಗೆ ಸಂಬಂಧ ಹೊಂದಿವೆ. ಮೆದುಳಿನ ಪಾರ್ಶ್ವವಾಯುವಿನ ಎಚ್ಚರಿಕೆ ಲಕ್ಷಣಗಳನ್ನು ಗುರುತಿಸುವಲ್ಲಿ ವಿಳಂಬವು ಮಾರಕವಾಗಬಹುದು. ಪಾರ್ಶ್ವವಾಯು ಚಿಕಿತ್ಸೆಯಲ್ಲಿ, ನಿಮಿಷಗಳು ಅತ್ಯಂತ ಮಹತ್ವದ್ದಾಗಿವೆ. ವಿಳಂಬವು ಶಾಶ್ವತ ಮೆದುಳಿನ ಹಾನಿಯನ್ನು ಉಂಟುಮಾಡಬಹುದು


“ಮರುಭೂಮಿಯ ಹಡಗುಗಳು” ಒಂಟೆಗಳು ದೇಹದಲ್ಲಿ ನೀರನ್ನು ಸಂಗ್ರಹಿಸುವುದಿಲ್ಲ..!

ಸೂರ್ಯಪ್ರಗತಿ ನ್ಯೂಸ್.ಕಾಂ

ಮರಭೂಮಿಯ ಹಡಗು ಎಂದರೆ ನಮಗೆ ತಟ್ಟನೆ ನೆನಪಾಗೋದು ಒಂಟೆಗಳು, ಆದರೆ ಒಂಟೆಗಳ ಬಗ್ಗೆ ನಾವು ಈಗಿನ ಕಾಲದಲ್ಲಿಯೂ ಕೆಲವು ಸುಳ್ಳು ಸುದ್ದಿಗಳನ್ನು ಒಬ್ಬರಿಂದ ಒಬ್ಬರಿಗೆ ಹರಿದಾಡಿಸುತ್ತಾ ಇದ್ದೇವೆ. ಒಂಟೆಗಳು ವಿಶಿಷ್ಟವಾಗಿ ಕಾಣುವ ಜೀವಿಗಳಾಗಿದ್ದು, ಇವುಗಳ ಉಬ್ಬುಗಳಿಂದ ಸುಲಭವಾಗಿ ಗುರುತಿಸಬಹುದು. ಇವು ಆಫ್ರಿಕಾ ಮತ್ತು ಏಷ್ಯಾದ ಮರುಭೂಮಿ ಪ್ರದೇಶಗಳಲ್ಲಿ ವಾಸಿಸುತ್ತವೆ. ಒಂಟೆಯಲ್ಲಿ 2 ವಿಧಗಳಿವೆ: ಡ್ರೊಮೆಡರಿ, ಇದು ಒಂದು ಉಬ್ಬನ್ನು ಹೊಂದಿದೆ ಮತ್ತು ಬ್ಯಾಕ್ಟ್ರಿಯನ್, ಇದು ಎರಡು ಉಬ್ಬುಗಳನ್ನು ಹೊಂದಿದೆ. ಎರಡೂ ವಿಧದ ಒಂಟೆಗಳನ್ನು ಸಾಕಬಹುದು. ಅರೇಬಿಯನ್ ಒಂಟೆ ಎಂದೂ ಕರೆಯಲ್ಪಡುವ ಡ್ರೊಮೆಡರಿ ಒಂಟೆಯನ್ನು ಉತ್ತರ ಆಫ್ರಿಕಾ ಮತ್ತು ಮಧ್ಯಪ್ರಾಚ್ಯದಲ್ಲಿ ಕಾಣಬಹುದು. ಬ್ಯಾಕ್ಟ್ರಿಯನ್ ಒಂಟೆಗಳನ್ನು ಮಧ್ಯ ಏಷ್ಯಾದಲ್ಲಿ ಕಾಣಬಹುದು. ನಮ್ಮ ಭಾರತದ ರಾಜಸ್ಥಾನ, ಹರಿಯಾಣ, ಪಂಜಾಬ್, ಗುಜರಾತ್, ಮಧ್ಯ ಪ್ರದೇಶ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಒಂಟೆಗಳಿದ್ದು, ಅತಿ ಹೆಚ್ಚು ಒಂಟೆಗಳನ್ನು “ರಾಜಸ್ಥಾನದಲ್ಲಿ” ಕಾಣಬಹುದು.

ಒಂಟೆಗಳು 2.13 ಮೀಟರ್ (7 ಅಡಿ) ಎತ್ತರವನ್ನು ಹೊಂದಿದ್ದು, 680 ಕಿಲೋ ಗ್ರಾಂ ನಷ್ಟು ತೂಕವಿರುತ್ತವೆ. ಇವು ವಿಶೇಷವಾಗಿ ಮರುಭೂಮಿಯ ಜೀವನಕ್ಕೆ ಹೊಂದಿಕೊಳ್ಳುತ್ತವೆ. ಇವುಗಳ ಕಣ್ಣುಗಳು ಮೂರು ಕಣ್ಣುರೆಪ್ಪೆಗಳನ್ನು ಹೊಂದಿದ್ದು, ಎರಡು ಸಾಲುಗಳ ರೆಪ್ಪೆಕೂದಲುಗಳನ್ನು ಹೊಂದಿವೆ. ಇವು ಕಣ್ಣುಗಳಿಗೆ ಮರಳನ್ನು ಪ್ರವೇಶಿಸದಂತೆ ತಡೆಯುತ್ತವೆ. ಒಂಟೆಯ ಕಿವಿಗಳು ತುಪ್ಪಳದಿಂದ ಕೂಡಿರುತ್ತವೆ. ಕೂದಲುಗಳು ತಮ್ಮ ಕಿವಿಗಳಿಂದ ಮರಳು ಮತ್ತು ಧೂಳನ್ನು ದೂರವಿಡುತ್ತವೆ. ಕಿವಿ ಮತ್ತು ಕಣ್ಣುಗಳ





ಹೊರತಾಗಿ, ಇವುಗಳ ಮೂಗಿನ ಹೊಳ್ಳೆಗಳು ಎರಡು, ಉಸಿರಾಟದ ನಡುವೆ ಮುಚ್ಚುವ ಮೂಲಕ ಮರಳನ್ನು ಪ್ರವೇಶಿಸದಂತೆ ತಡೆಯುತ್ತವೆ. ಒಂಟೆಗಳು ವಿಶೇಷವಾಗಿ ವಿನ್ಯಾಸಗೊಳಿಸಿದ ಪಾದಗಳ ಕಾರಣದಿಂದಾಗಿ ಮರಳಿನಾದ್ಯಂತ ಸುಲಭವಾಗಿ ಚಲಿಸುತ್ತವೆ. ಒಂಟೆಗಳ ಪಾದವು ಎರಡು ಕಾಲ್ಬೆರಳುಗಳನ್ನು ಒಳಗೊಂಡಿರುತ್ತದೆ. ಪಾದವು ನೆಲವನ್ನು ಮುಟ್ಟಿದಾಗ ಕಾಲ್ಬೆರಳುಗಳು ಹರಡುತ್ತವೆ ಮತ್ತು ಮರಳಿನಲ್ಲಿ ಕಾಲುಗಳು ಮುಳುಗುವುದನ್ನು ತಡೆಯುತ್ತದೆ. ಒಂಟೆಗಳು ಹೆಚ್ಚಾಗಿ ತಮ್ಮ ಉಬ್ಬುಗಳಿಗೆ ಪ್ರಸಿದ್ಧವಾಗಿವೆ. ಉಬ್ಬುಗಳು (ಹಂಗಳು) ನೀರನ್ನು ಸಂಗ್ರಹಿಸುತ್ತವೆ ಎಂದು ಹೆಚ್ಚಿನ ಜನರು ನಂಬುತ್ತಾರೆ, ಆದರೆ ಇವು ವಾಸ್ತವವಾಗಿ ಕೊಬ್ಬನ್ನು ಸಂಗ್ರಹಿಸುತ್ತವೆ, ಇತರ ಆಹಾರ ಮೂಲಗಳು ಲಭ್ಯವಿಲ್ಲದಿದ್ದಾಗ ಒಂಟೆಗಳು ಉಬ್ಬುಗಳಲ್ಲಿ (ಹಂಪ್) ಇರುವ ಕೊಬ್ಬನ್ನೂ ಶಕ್ತಿಯ ಮೂಲವಾಗಿ ಬಳಸುತ್ತವೆ. ಒಂಟೆಗಳು ತಮ್ಮ ಸುತ್ತ–ಮುತ್ತ ಪರಿಸರಕ್ಕೆ ಹೊಂದಿಕೊಳ್ಳಲು ಇತರ ಮಾರ್ಗಗಳನ್ನು ಹೊಂದಿವೆ. ಒಂಟೆ ಆಹಾರ ಮತ್ತು ನೀರಿಲ್ಲದೆ ದೀರ್ಘಕಾಲ ಬದುಕಬಲ್ಲದು. ಹೆಚ್ಚಿನ ಸಸ್ತನಿಗಳು ತಮ್ಮ ದೇಹದ ನೀರನ್ನು 15% ನಷ್ಟು ಕಳೆದುಕೊಂಡರೆ ಸಾಯುತ್ತವೆ (ನಿರ್ಜಲೀಕರಣದ ನೀರಿನ ನಿರ್ಣಾಯಕ ನಷ್ಟವನ್ನು ನಿರ್ಜಲೀಕರಣ ಎಂದು ಕರೆಯಲಾಗುತ್ತದೆ), ಆದರೆ ಒಂಟೆಗಳು ನಿರ್ಜಲೀಕರಣಗೊಳ್ಳದೆ 20–25% ನೀರನ್ನು ಕಳೆದುಕೊಳ್ಳಬಹುದು. ನೀರನ್ನು ಕುಡಿಯುವಾಗ ಸಾಧ್ಯವಾದಷ್ಟು ನೀರನ್ನು ಕುಡಿಯುತ್ತವೆ. ಇವು ಏಕಕಾಲದಲ್ಲಿ 151 ಲೀಟರ್ ನಷ್ಟು ನೀರನ್ನು ಕುಡಿಯಬಹುದು. ಇವುಗಳ ದೇಹದ ಉಷ್ಣತೆಯು 34 ರಿಂದ (ರಾತ್ರಿಯ ಸಮಯದಲ್ಲಿ) 41 ಡಿಗ್ರಿ ಸೆಲ್ಸಿಯಸ್‌ವರೆಗೆ (ಹಗಲಿನಲ್ಲಿ) ಇರುತ್ತದೆ. ತಾಪಮಾನವು 41 ಡಿಗ್ರಿ ಸೆಲ್ಸಿಯ್ಸ್‌ಗಿಂತ ಹೆಚ್ಚಾದಾಗ ಇವು ಬೆವರಲು ಪ್ರಾರಂಭಿಸುತ್ತವೆ.



ಒಂಟೆಗಳು ಸಸ್ಯಹಾರಿ ಪ್ರಾಣಿಗಳಾಗಿವೆ. ಇವುಗಳ ದಪ್ಪ ತುಟಿಗಳು ಮುಳ್ಳಿನ ಸಸ್ಯಗಳಂತಹ ಗಿಡಗಳನ್ನು ತಿನ್ನಲು ಅನುವು ಮಾಡಿಕೊಡುತ್ತದೆ. ಒಂಟೆಯ ಹಾಲು ಕಬ್ಬಿಣ, ವಿಟಮಿನ್‌ಗಳು ಮತ್ತು ಖನಿಜಗಳಿಂದ ಸಮೃದ್ಧವಾಗಿದೆ ಮತ್ತು ಇದು ಹಸುವಿನ ಹಾಲಿಗಿಂತ ಆರೋಗ್ಯಕರವಾಗಿದೆ ಏಕೆಂದರೆ ಇದು ಕಡಿಮೆ ಕೊಬ್ಬನ್ನು ಹೊಂದಿರುತ್ತದೆ. ಒಂಟೆಗಳು ಗಂಟೆಗೆ 64 ಕಿಲೋ ಮೀಟರಗಳಷ್ಟು ಓಡಬಲ್ಲವು. ಇವುಗಳನ್ನು ಕೆರಳಿಸಿದಾಗ ತಮ್ಮ ಹೊಟ್ಟೆಯಿಂದ ಹಸಿರು ಪದಾರ್ಥವನ್ನು ಉಗುಳುವುದು. ಅಲ್ಲದೆ ತಮ್ಮ ಆತ್ಮರಕ್ಷಣೆಗೆಗಾಗಿ ಎದುರಾಳಿಯನ್ನು ಒದೆಯಲು ಎಲ್ಲಾ ನಾಲ್ಕು ಕಾಲುಗಳನ್ನು ಬಳಸುತ್ತವೆ. ಒಂಟೆ ತನ್ನ ದೇಹದಲ್ಲಿ ಎಷ್ಟು ಸಾಧ್ಯವೋ ಅಷ್ಟು ನೀರನ್ನು ಉಳಿಸಿಕೊಳ್ಳುತ್ತವೆ. ಆದ್ದರಿಂದ ಇವು ಸಿರಪ್ನಷ್ಟು ದಟ್ಟವಾದ ಮೂತ್ರವನ್ನು ಮತ್ತು ಒಣಗಿದ ಮಲವನ್ನು ಉತ್ಪಾದಿಸುತ್ತವೆ. ಇವುಗಳ ಮಲವನ್ನು ಇಂಧನವಾಗಿ ಬಳಸುತ್ತಾರೆ.

ಒಂಟೆಗಳನ್ನು ಹಿಂದೆ ಹಲವಾರು ಯುದ್ಧಗಳಲ್ಲಿ (ವಿಶೇಷವಾಗಿ ಮರುಭೂಮಿ ಪ್ರದೇಶಗಳಲ್ಲಿ) ಬಳಸಲಾಗುತ್ತಿತ್ತು ಏಕೆಂದರೆ ಇವು ನೀರು ಮತ್ತು ಆಹಾರವಿಲ್ಲದೆ ದೂರದವರೆಗೆ ಪ್ರಯಾಣಿಸುವ ಸಾಮರ್ಥ್ಯವನ್ನು ಹೊಂದಿವೆ ಮತ್ತು ಸಾಮಾನುಗಳನ್ನು ಹೊತ್ತುಕೊಂಡು ಹೋಗುತ್ತವೆ. ಇವುಗಳಿಗೆ ವಯಸ್ಸಾದಾಗ ಅಥವಾ ದುರ್ಬಲವಾದಾಗ ಇದರ ಮಾಂಸವನ್ನು ಆಹಾರಕ್ಕಾಗಿ ಮತ್ತು ತುಪ್ಪಳವನ್ನು ಬಟ್ಟೆಗಾಗಿ ಬಳಸಲಾಗುತ್ತದೆ. ಒಂಟೆಯಲ್ಲಿ ಗರ್ಭಧಾರಣೆಯು ಆಹಾರದ ಲಭ್ಯತೆಯನ್ನು ಅವಲಂಬಿಸಿ 9–14 ತಿಂಗಳುಗಳವರೆಗೆ ಇರುತ್ತದೆ. ಇವು ಒಂದು ಮರಿಗೆ ಜನ್ಮ ನೀಡುತ್ತವೆ ಮತ್ತು ಮರಿಯು ಹುಟ್ಟಿದ ಕೆಲವು ಗಂಟೆಗಳ ನಂತರ ಓಡಬಲ್ಲದು.



ಒಂಟೆಗಳು ಗುಂಪುಗಳಲ್ಲಿ ಒಟ್ಟಿಗೆ ಇರಲು ಇಷ್ಟಪಡುತ್ತವೆ ಈ ಗುಂಪನ್ನು “ಹಿಂಡು” ಎಂದು ಕರೆಯುತ್ತಾರೆ. ಪ್ರಬಲ ಗಂಡು ಒಂಟೆಯು ಈ ಹಿಂಡನ್ನು ಮುನ್ನಡೆಸುತ್ತದೆ. ಆದರೆ ಇತರ ಅನೇಕ ಗಂಡು ಒಂಟೆಗಳು ತಮ್ಮದೇ ಆದ ಗುಂಪುಗಳನ್ನು ಹೊಂದಿರುತ್ತವೆ ಅದನ್ನು “ಬ್ಯಾಚುಲರ್ ಹಿಂಡು” ಎಂದು ಕರೆಯುತ್ತಾರೆ. ಒಂಟೆಗಳು ತುಂಬಾ ಸಾಮಾಜಿಕವಾಗಿರುತ್ತವೆ ಮತ್ತು ಪರಸ್ಪರರ ಮುಖದಲ್ಲಿ ಬೀಸುವ ಮೂಲಕ ಪರಸ್ಪರ ಶುಭಾಶಯ ಕೋರಲು ಇಷ್ಟಪಡುತ್ತವೆ. ಒಂಟೆಗಳು ಅನೇಕ ಶಬ್ದಗಳೊಂದಿಗೆ ಪರಸ್ಪರ ಸಂವಹನ ನಡೆಸುತ್ತವೆ.

ಒಂಟೆಗಳು 40–50 ವರ್ಷಗಳವರೆಗೆ ಬದುಕುತ್ತವೆ.

ಮಾನವರು ಸಾವಿರಾರು ವರ್ಷಗಳಿಂದ ಒಂಟೆಗಳನ್ನು ಸಾರಿಗೆ ಸಾಧನವಾಗಿ ಬಳಸುತ್ತಿದ್ದಾರೆ. ನ್ಯಾಷನಲ್ ಜಿಯಾಗ್ರಫಿಕ್ ಪ್ರಕಾರ ಇವು ತಮ್ಮ ಬೆನ್ನಿನ ಮೇಲೆ (170 ರಿಂದ 270 ಕಿಲೋಗ್ರಾಂನಷ್ಟು) ಸಾಮಾನುಗಳ ಹೊರೆಯನ್ನು ಹೊತ್ತು ಮರಭೂಮಿಯಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಬಲ್ಲವು ಆದುದರಿಂದ ಇವುಗಳಿಗೆ “ಮರುಭೂಮಿಯ ಹಡಗುಗಳು” ಎಂದು ಕರೆಯುತ್ತಾರೆ. ದೇಶೀಯ ಒಂಟೆಗಳು ಸಾಮಾನ್ಯವಾಗಿ ಮಾಂಸ, ಹಾಲು ಮತ್ತು ಚರ್ಮ ಅಥವಾ ಉಣ್ಣೆ ಉತ್ಪನ್ನಗಳಿಗೆ ಮುಖ್ಯ ಮೂಲವಾಗಿವೆ. ಕಾಡು ಬ್ಯಾಕ್ಟ್ರಿಯನ್ ಒಂಟೆಯನ್ನು ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ ಪ್ರಕಾರ ಅಳಿವಿನಂಚಿನಲ್ಲಿದೆ ಎಂದು ಪರಿಗಣಿಸಲಾಗಿದೆ ಮತ್ತು ಇದರ ಪ್ರಾಣಿ ಸಾಂದ್ರತೆಯು ಕಡಿಮೆಯಾಗುತ್ತಿದೆ.

ಲೇಖಕರು :.ನವೀನ.ಪ್ಯಾಟಿಮನಿ
ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯ

ನೇಣಿ ಬಿಗಿದು ಸ್ಥಿತಿಯಲ್ಲಿ ವೃದ್ಧ ಮಹಿಳೆ ಶವ : ತೀವ್ರಗೊಂಡ ಪೊಲೀಸ್ ತನಿಖೆ



ವರದಿ ಗುಬ್ಬಿ ಭರತ್

ಗುಬ್ಬಿ: ತೋಟದ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಹಿಳೆ ಶವ ಪತ್ತೆಯಾಗಿ ನಂತರ ಮೃತರ ಕಣ್ಣಿನ ಗುಡ್ಡೆ ನಾಪತ್ತೆಯಾದ ಹಿನ್ನಲೆ ಕೊಲೆ ಶಂಕೆ ವ್ಯಕ್ತಪಡಿಸಿದ ಪೊಲೀಸರು ತೀವ್ರ ತನಿಖೆಗೆ ಮುಂದಾದ ಘಟನೆ ತಾಲ್ಲೂಕಿನ ನಿಟ್ಟೂರು ಹೋಬಳಿ ಕಾರೆಕುರ್ಚಿ ಗ್ರಾಮದಲ್ಲಿ ನಡೆದಿದೆ.

ಅಂಬಿಕಾ ಅಲಿಯಾಸ್ ಭ್ರಮರಾಂಭಿಕಾ (66) ಅನುಮಾನಾಸ್ಪದವಾಗಿ ಮೃತಪಟ್ಟ ವೃದ್ಧ ಮಹಿಳೆ. ನೇಣು ಬಿಗಿದ ಸ್ಥಿತಿಯಲ್ಲಿದ್ದ ಅಂಬಿಕಾ ಅವರ ಒಂದು ಕಣ್ಣಿನ ಗುಡ್ಡೆ ನಾಪತ್ತೆಯಾದ ಕಾರಣ ಹಲವು ಅನುಮಾನ ಹುಟ್ಟಿದೆ.

ಕಾರೆಕುರ್ಚಿ ಗ್ರಾಮದಲ್ಲಿ ಜಮೀನುದಾರರಾಗಿದ್ದ ಅಂಬಿಕಾ ಅವರ ಒಬ್ಬನೇ ಮಗ ಮನೋಹರ ಹಾಗೂ ಸೊಸೆ ಕಾವ್ಯ ಶ್ರೀ ಮೂವರು ಸದಸ್ಯರ ಈ ಕುಟುಂಬ ಗ್ರಾಮದ ದೊಡ್ಡ ಮನೆಯಲ್ಲಿ ವಾಸವಾಗಿದ್ದರು. ತೋಟದ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿದ್ದ ಅಂಬಿಕಾ ಅವರ ಮೃತದೇಹವನ್ನು ಕೆಳಗಿಳಿಸಿರುವುದು ಹಾಗೂ ಬಲ ಪ್ರಯೋಗದಿಂದ ಮೃತರ ಒಂದು ಕಣ್ಣು ಗುಡ್ಡೆ ನಾಪತ್ತೆಯಾಗಿರುವುದು ಪೊಲೀಸರ ಶಂಕೆಗೆ ಬಲವಾದ ಕಾರಣವಾಗಿದೆ. ವಾಸದ ಮನೆಯಿಂದ 200 ಮೀಟರ್ ದೂರದಲ್ಲಿರುವ ತೋಟದ ಮನೆಯಲ್ಲಿ ನೇಣಿಗೆ ಶರಣಾದ ಅಂಬಿಕಾ ಬಗ್ಗೆ ಹಲವು ಅನುಮಾನ ಕಾರಣವಾಗಿದೆ. ತಡರಾತ್ರಿ ತೋಟದ ಮನೆಯತ್ತ ಅಂಬಿಕಾ ಧಾವಿಸಿದ್ದು ನಂತರ ನಡೆದಿದ್ದು ಆತ್ಮಹತ್ಯೆಯೇ ಅಥವಾ ಕೊಲೆಯೇ ಎಂಬ ಶಂಕೆಗೆ ಪೊಲೀಸರ ತನಿಖೆ ಉತ್ತರ ನೀಡಲಿದೆ.

ಸ್ಥಳಕ್ಕೆ ಆಗಮಿಸಿದ ಚೇಳೂರು ಪೊಲೀಸರು ಕಣ್ಣಿನ ಗುಡ್ಡೆ ನಾಪತ್ತೆಯ ಕಾರಣದಿಂದ ಹಲವು ಆಯಾಮದಲ್ಲಿ ತನಿಖೆ ಆರಂಭಿಸಿದ್ದಾರೆ.

ಸ್ಥಳಕ್ಕೆ ಎಎಸ್ ಪಿ ಪುರುಷೋತ್ತಮ್, ಸಿಪಿಐ ರಾಘವೇಂದ್ರ ಧಾವಿಸಿ ಮಗ ಸೊಸೆಯನ್ನು ತೀವ್ರ ತನಿಖೆಗೆ ಒಳಪಡಿಸಿದ್ದಾರೆ. ಮೃತರು ತುಮಕೂರಿನ ಅಭಿವೃದ್ಧಿ ಪೋರಂ ಫೌಂಡೇಶನ್ ಕುಂದರನಹಳ್ಳಿ ರಮೇಶ್ ಅವರ ಸಹೋದರಿ. ನಂತರ ಆಗಮಿಸಿದ ಬೆರಳಚ್ಚು ತಜ್ಞರು, ಶ್ವಾನದಳದ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಸಿದ್ಧಗೊಳಿಸಿದ್ದು ಅಲ್ಲಿನ ಪರಿಶೀಲನೆಯಿಂದ ಸಾವಿನ ನಿಖರ ಕಾರಣ ತಿಳಿಯಲಿದೆ.

ಸಾಂಕ್ರಾಮಿಕ ರೋಗ ಹತೋಟಿಗೆ ತಾಲ್ಲೂಕು ಆಡಳಿತ ಸಜ್ಜು



ಚಿಕ್ಕನಾಯಕನಹಳ್ಳಿ:ಬೇಸಿಗೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನಾದ್ಯಂತ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಯಲು ಇಡೀ ತಾಲ್ಲೂಕು ಆಡಳಿತ ಈಗಿನಿಂದಲೇ ಸಜ್ಜಾಗಬೇಕು ಎಂದು ತಹಶೀಲ್ದಾರ್ ಮಮತಾ ಸೂಚನೆ ನೀಡಿದರು.

ಪಟ್ಟಣದ ಆಡಳಿತ ಸೌಧದ ಸಭಾಂಗಣದಲ್ಲಿ ನಡೆದ ವಿವಿಧ ಇಲಾಖಾ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೇಸಿಗೆಯಲ್ಲಿ ಜಾತ್ರೆಗಳು ಹೆಚ್ಚಾಗಿ ನಡೆಯಲಿದ್ದು, ದಾಸೋಹ ಮತ್ತು ಪ್ರಸಾದ ವಿತರಣೆಯ ಸಂದರ್ಭದಲ್ಲಿ ಅಶುದ್ಧ ನೀರು ಅಥವಾ ಆಹಾರ ಸೇವನೆಯಿಂದ ಅನಾಹುತಗಳಾಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ಧಾರ್ಮಿಕ ಕಾರ್ಯಕ್ರಮಗಳಿಗೆ ಸ್ಥಳೀಯ ಸಂಸ್ಥೆಗಳ ಅನುಮತಿ ಕಡ್ಡಾಯ. ಶಾಲೆ, ವಸತಿ ನಿಲಯಗಳು ಹಾಗೂ ಪಂಚಾಯಿತಿ ವ್ಯಾಪ್ತಿಯ ಶುದ್ಧ ನೀರಿನ ಘಟಕಗಳ ನೀರಿನ ಗುಣಮಟ್ಟದ ಇತ್ತೀಚಿನ ವರದಿಯನ್ನು ತಕ್ಷಣ ಸಲ್ಲಿಸಬೇಕು ಎಂದು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಗ್ರಾಮ ಲೆಕ್ಕಿಗರಿಗೆ ಸೂಚಿಸಿದರು. ಜೊತೆಗೆ, ಮಹಿಳಾ ವಸತಿ ನಿಲಯಗಳ ವಾರ್ಡನ್‌ಗಳು ಕೇಂದ್ರ ಸ್ಥಾನದಲ್ಲೇ ವಾಸಿಸುವುದನ್ನು ಕಡ್ಡಾಯಗೊಳಿಸಿದರು.

ತಾಲ್ಲೂಕಿನ ಆಶ್ರೀಹಾಳ್, ಬಗ್ಗನಹಳ್ಳಿ ಮತ್ತು ಕೊಡಲಾಗರ ಭಾಗದಲ್ಲಿ ಚಿರತೆ ಓಡಾಟದಿಂದ ಜನರು ಆತಂಕಕ್ಕೀಡಾಗಿರುವ ಬಗ್ಗೆ ಅರಣ್ಯಾಧಿಕಾರಿ ಅಮಿತ್ ಅವರನ್ನು ತಹಶೀಲ್ದಾರ್ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ಜನರ ಆತಂಕ ನಿವಾರಣೆಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು. ಸಾಕು ಪ್ರಾಣಿಗಳು ಅಸಹಜ ಸಾವು ಸಂಭವಿಸಿದರೆ ತಕ್ಷಣ ಪ್ರಾಥಮಿಕ ವರದಿ ಸಲ್ಲಿಸಬೇಕೆಂದು ಪಶು ಇಲಾಖೆಯ ಸಹಾಯಕ ನಿರ್ದೇಶಕ ವೈ.ಜಿ. ಕಾಂತರಾಜು ಅವರಿಗೆ ನಿರ್ದೇಶನ ನೀಡಿದರು.

ಹುಳಿಯಾರು ಭಾಗದಲ್ಲಿ ಕುರಿಗಳು ಮತ್ತು ಮಕ್ಕಳ ಮೇಲೆ ನಾಯಿಗಳ ದಾಳಿಯಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ತಹಶೀಲ್ದಾರ್, ಪಶುಗಳಿಗೆ ತಗಲುವ ರೋಗಗಳಿಗೆ ಸಾಕಾಣಿಕೆದಾರರು ಸ್ವಯಂ ವೈದ್ಯಕೀಯ ಚಿಕಿತ್ಸೆ ನೀಡಬಾರದು. ಇಲಾಖೆಯಲ್ಲಿ ಲಭ್ಯವಿರುವ ಉಚಿತ ಔಷಧೋಪಚಾರದ ಬಗ್ಗೆ ಪಶುಪಾಲಕರಿಗೆ ಸರಿಯಾದ ಮಾಹಿತಿ ನೀಡಿ. ಖಾಸಗಿ ಔಷಧ ಬಳಕೆಯಿಂದ ಪ್ರಾಣಹಾನಿಯಾಗದಂತೆ ಜಾಗೃತಿ ಮೂಡಿಸಿ ಎಂದು ತಾಕೀತು ಮಾಡಿದರು.

ಪಟ್ಟಣದ ರಸ್ತೆ ಬದಿಯ ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿ ನಡೆಸುತ್ತಿರುವ ಫಾಸ್ಟ್ ಫುಡ್ ಅಂಗಡಿಗಳಲ್ಲಿ ಸ್ವಚ್ಛತೆ ಇಲ್ಲದಿರುವ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ, ಪೊಲೀಸ್ ಇಲಾಖೆಯ ನೆರವಿನೊಂದಿಗೆ ತೆರವು ಕಾರ್ಯಾಚರಣೆ ನಡೆಸಲು ಪುರಸಭಾ ಮುಖ್ಯಾಧಿಕಾರಿ ಮಂಜಮ್ಮ ಅವರಿಗೆ ಸೂಚಿಸಿದರು.ಸರ್ಕಾರಿ ಅಧಿಕಾರಿಗಳೂ ಸೇರಿದಂತೆ ಯಾರೇ ಸಂಚಾರಿ ನಿಯಮ ಉಲ್ಲಂಘಿಸಿದರೂ ದಂಡ ವಿಧಿಸುವಂತೆ ಪೊಲೀಸ್ ಇಲಾಖೆಗೆ ಮುಕ್ತ ಅಧಿಕಾರ ನೀಡಿದರು.

ದೇಸಿ ಕಲೆಗಳ ಉಳಿವಿಗಾಗಿ ಅಗತ್ಯವಾದ ಪ್ರೋತ್ಸಾಹ ಸರ್ಕಾರ ನೀಡಬೇಕಿದೆ



ಶಿರಾ : ಕಂಸಾಳೆ, ಕೋಲಾಟ, ವೀರಗಾಸೆಯಂತಹ ಕಲಾ ಪ್ರಕಾರಗಳ ಬಗ್ಗೆ ಇಂದಿನ ಮಕ್ಕಳಿಗೆ ತಿಳಿಸಲು ಪಠ್ಯ ಪುಸ್ತಕದಲ್ಲಿ ಅಳವಡಿಸುವ ಕೆಲಸ ಸರ್ಕಾರ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡಬೇಕಿದೆ ಎಂದು ನಾದೂರು ಗ್ರಾಮ ಪಂಚಾಯ್ತಿ ಅಧ್ಯಕ್ಷೆ ತುಳಸಿ ಮಧುಸೂದನ್ ಹೇಳಿದರು. ಅವರು ತಾಲ್ಲೂಕಿನ ಪಟ್ಟನಾಯಕನಹಳ್ಳಿ ಗ್ರಾಮದ ಶಾಂತಿನಿಕೇತನ ವಿದ್ಯಾಸಂಸ್ಥೆಯ ಬೆಳ್ಳಿ ಹಬ್ಬದ ಹಿನ್ನಲೆಯಲ್ಲಿ ಅಯೋಜಿದ್ದ ಕಲಾ ತಂಡಗಳ ಜಾಥ ಉದ್ಘಾಟಿಸಿ ಮಾತನಾಡಿದರು. ಕಲೆಯಲ್ಲಿ ಇತಿಹಾಸವುಳ್ಳ ನೈಜ ಕಲಾ ಪ್ರಕಾರದ ಕಲಾವಿದರಿಗೆ ಉತ್ತೇಜನ ನೀಡಲು ಕಲೆಯನ್ನು ಪ್ರೋತ್ಸಾಹಿಸಿ ಕಲೆಯನ್ನೇ ನಂಬಿ ಜೀವನ ಕಟ್ಟಿಕೊಂಡಿರುವಂತಹ ಕಲಾವಿದರಿಗೆ ಎಲ್ಲಾ ರೀತಿಯ ಸರ್ಕಾರಿ ಸೌಲಭ್ಯಗಳು ಸಿಗುವಂತಾಗಬೇಕು, ಪ್ರಶಸ್ತಿ ಮತ್ತು ಜಿಲ್ಲಾ, ತಾಲ್ಲೂಕು, ಹೋಬಳಿಯ ಹಂತದಲ್ಲಿ ಕಾರ್ಯಕ್ರಮ ರೂಪಿಸಬೇಕು ಮಕ್ಕಳಲ್ಲಿ ಇಂತಹ ಕಲೆಯ ಬಗ್ಗೆ ಜಾಗೃತಿ ಮೂಡಿಸಿ ಆಸಕ್ತಿ ತೋರುವ ಮನೋಭಾವವನ್ನು ಬೆಳೆಸಬೇಕು ಎಂದರು.ಕ.ಸಾ.ಪ ಅಧ್ಯಕ್ಷರಾದ ಬಿ.ಪಿ.ಪಾಂಡುರಂಗಯ್ಯ ಮಾತನಾಡಿ ಶಾಂತಿನಿಕೇತನ ಸಂಸ್ಥೆಯ ಪ್ರಮುಖ ಉದ್ದೇಶವೇ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕನ್ನಡದ ಜೊತೆಗೆ ಆಂಗ್ಲ ಭಾಷೆಯ ಶಿಕ್ಷಣ ಸುಲಭಕ್ಕೆ ದೊರೆಯಲಿ ಎಂಬುದಾಗಿದೆ ಎಂದರು.

ವೆನಿಜುಲಾ ಅಧ್ಯಕ್ಷರ ಅಪಹರಣ ಎಡಪಕ್ಷಗಳಿಂದ ಪ್ರತಿಭಟನೆ



ಜಗತ್ತಿನ ಸರ್ವಾಧಿಕಾರಿ, ಸಾಮ್ರಾಜ್ಯಶಾಹಿಗಳು ಇತಿಹಾಸದಿಂದ ಪಾಠ ಕಲಿಯಬೇಕಾಗಿದೆ.ಅಮೇರಿಕಾ ದೇಶದ ಟ್ರಂಪ್‌ನ ನಡೆಗೆ ಕಡಿವಾಣ ಹಾಕಲು ಜಗತ್ತಿನ ಪ್ರಜಾಪ್ರಭುತ್ವದ ದೇಶಗಳು, ಯುದ್ಧವಿರೋದಿನೀತಿಯನ್ನು, ಶಾಂತಿಯನ್ನು ಬಯಸುವ ಮತ್ತು ಈ ಎಲ್ಲದರ ಮುಖ್ಯಸ್ಥನಾಗಿರುವ ವಿಶ್ವಸಂಸ್ಥೆ ಮಧ್ಯಪ್ರವೇಶ ಮಾಡಬೇಕು ಎಂದು ಪ್ರಗತಿಪರ ಚಿಂತಕ ಕೆ. ದೊರೈರಾಜ್ ಆಗ್ರಹಿಸಿದರು.

ಅವರು ಸಿಪಿಐ, ಸಿಪಿಐ(ಎಂ.) ಎಸ್.ಯು.ಸಿ.ಐ (ಸಿ) ಎಡಪಕ್ಷಗಳು ವೆನಿಜುವೆಲಾದ ಅಧ್ಯಕ್ಷರ ಅಪಹರಣವನ್ನು ಖಂಡಿಸಿ ನಗರದ ಸ್ವಾತಂತ್ರ್ಯ ಚೌಕದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ವೆನಿಜುಲಾದ ಅಧ್ಯಕ್ಷರ ಅಪಹರಣ ಮಾಡುವುದು ಅತ್ಯಂತ ಖಂಡನೀಯವಾದುದು ಹಾಗೂ ಗೂಂಡಾಗಿರಿಯ ಪ್ರವೃತ್ತಿಯಾಗಿದ್ದು ಯುದ್ಧಕೋರ ಟ್ರಂಪ್‌ನ ನಡೆಯನ್ನು ಎಲ್ಲಾ ಶಾಂತಿಬಯಸುವ ದೇಶಗಳು ಖಂಡಿಸಬೇಕು ಎಂದರು.

ಪರಿಸರವಾದಿ ಸಿ. ಯತಿರಾಜು ಮಾತನಾಡಿ, ಅಮೇರಿಕಾಕ್ಕೆ ವೆನಿಜುವೆಲಾದ ಮೇಲಿನ ತೈಲ ಪ್ರೀತಿಯಿಂದ ವೆನಿಜುವೆಲಾದ ಅಧ್ಯಕ್ಷರನ್ನು ಅಪಹರಣವನ್ನು ಮಾಡಿದ್ದಾರೆ ಎಂದರು ಮಧ್ಯಪ್ರವೇಶ ಮಾಡುವ ಹೆಸರಿನಲ್ಲಿ ವೆನಿಜುವೆಲಾದ ಅಧ್ಯಕ್ಷರನ್ನು ಅಪಹರಣ ಮಾಡಿದ್ದು ಈ ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

SP NEWS ನ್ಯೂಸ್ ಸುದ್ದಿ

ಜ.11ರಂದು ಸ್ಪರ್ಧಾತ್ಮಕ ಪರೀಕ್ಷೆ: ನಿಷೇಧಾಜ್ಞೆ ಜಾರಿ

ತುಮಕೂರು: ತುಮಕೂರು ಜಿಲ್ಲೆಯ 9 ಪರೀಕ್ಷಾ ಕೇಂದ್ರಗಳಲ್ಲಿ ಜನವರಿ 11ರಂದು ಕೆ.ಇ.ಎ.ನಿಂದ ಅಧಿಸೂಚಿಸಲಾದ ಬಿ.ಡಿ.ಎ, ತಾಂತ್ರಿಕ ಶಿಕ್ಷಣ ಇಲಾಖೆ, ಆರ್.ಜಿ.ಯು.ಹೆಚ್.ಎಸ್., ಬಿ.ಡಬ್ಲ್ಯು.ಎಸ್.ಎಸ್.ಬಿ., ಕೆ.ಕೆ.ಆರ್.ಟಿ.ಸಿ., ಕೆ.ಎಸ್.ಡಿ.ಎಲ್., ಕೆ.ಎಸ್.ಎಸ್.ಐ.ಡಿ.ಸಿ., ಮುಂತಾದ ಇಲಾಖೆ/ ಸಂಸ್ಥೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಹಾಗೂ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಡೆಸಲು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀ. ವ್ಯಾಪ್ತಿಯೊಳಗಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶುಭ ಕಲ್ಯಾಣ್ ಆದೇಶ ಹೊರಡಿಸಿದ್ದಾರೆ.

ನಿಷೇಧಾಜ್ಞೆಯು ಜನವರಿ 11ರ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಜಾರಿಯಲ್ಲಿರುತ್ತದೆ. ಈ ನಿಷೇಧಾಜ್ಞೆಯನ್ವಯ ಪರೀಕ್ಷೆ ನಡೆಯುವ ದಿನಾಂಕದಂದು ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಬೆರಳಚ್ಚು ಕೇಂದ್ರಗಳನ್ನು ಮುಚ್ಚತಕ್ಕದ್ದು. ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಅನಧಿಕೃತ ವ್ಯಕ್ತಿಗಳು ಯಾರೂ ನಿರ್ಬಂಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಹಾಗೂ ನಿಷೇಧಾಜ್ಞೆಯನ್ನು ಉಲ್ಲಂಘನೆ ಮಾಡಿದ ವ್ಯಕ್ತಿಗಳನ್ನು ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ.

ಜಿಲ್ಲೆಯಲ್ಲಿ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಉತ್ತೇಜನ ನೀಡುವಂತಹ ವ್ಯಕ್ತಿಗಳು ಕಂಡುಬಂದಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳಲಾಗುವುದು ಎಂದು ಅವರು ಸೂಚಿಸಿದ್ದಾರೆ.

ತುರ್ತು ಪರಿಸ್ಥಿತಿ : ಸಹಾಯವಾಣಿ ಸ್ಥಾಪನೆ

ತುಮಕೂರು8: ಬೇಸಿಗೆ ಮತ್ತು ಪೂರ್ವ ಮುಂಗಾರು ಹಂಗಾಮಿನಲ್ಲಿ ಕುಡಿಯುವ ನೀರು ಸರಬರಾಜು, ಮೇವು ಪೂರೈಕೆ ಮತ್ತು ಪ್ರಕೃತಿ ವಿಕೋಪದಂತಹ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಾರ್ವಜನಿಕರ ರಕ್ಷಣೆಗಾಗಿ ಜಿಲ್ಲಾ ಮಟ್ಟದಲ್ಲಿ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ಸಹಾಯವಾಣಿಯನ್ನು ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಸಾರ್ವಜನಿಕರು ಸಹಾಯವಾಣಿ ಸಂಖ್ಯೆ: 0816–2213400, 0816–155304, 7304975519 ಹಾಗೂ 7304975529(ವಾಟ್ಸ್‌ಪ್)ಕ್ಕೆ ಕರೆ ಮಾಡಿ ಕುಡಿಯುವ ನೀರು ಸರಬರಾಜು, ಮೇವು ಪೂರೈಕೆ ಮತ್ತು ಪ್ರಕೃತಿ ವಿಕೋಪದಿಂದ ಉಂಟಾಗುವ ಯಾವುದೇ ತುರ್ತು ಪರಿಸ್ಥಿತಿಯ ಬಗ್ಗೆ ದೂರು ನೀಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಜ.14ರವರೆಗೆ ಡಿಜಿಟಲ್ ಇ–ಸ್ಟ್ಯಾಂಪ್ ತರಬೇತಿ

ತುಮಕೂರು: ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಡಿಜಿಟಲ್ ಇ–ಸ್ಟ್ಯಾಂಪ್ ವ್ಯವಸ್ಥೆಯನ್ನು ರಾಜ್ಯಾದ್ಯಂತ ಜಾರಿಗೊಳಿಸುವ ಕುರಿತು ಮಾರ್ಗಸೂಚಿಗಳೊಂದಿಗೆ ಉಪನೋಂದಣಿ ಕಚೇರಿಗಳಲ್ಲಿ ಡಿಜಿಟಲ್ ಇ–ಸ್ಟ್ಯಾಂಪ್ ತರಬೇತಿ ನೀಡುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ ವ್ಯಾಪ್ತಿಗೆ ಬರುವ ಎಲ್ಲಾ ಉಪನೋಂದಣಿ ಕಚೇರಿಗಳಲ್ಲಿ ಜನವರಿ 14ರವರೆಗೆ ತರಬೇತಿ ಆಯೋಜಿಸಲಾಗಿದೆ ಎಂದು ಜಿಲ್ಲಾ ನೋಂದಣಾಧಿಕಾರಿ ಬಿ. ಶ್ರೀಕಾಂತ್ ತಿಳಿಸಿದ್ದಾರೆ.

ತರಬೇತಿ ವಿವರ: ಜನವರಿ 9ರಂದು ಬೆಳಿಗ್ಗೆ 10 ಗಂಟೆಗೆ ತುರುವೇಕೆರೆ ಉಪನೋಂದಣಿ ಕಚೇರಿ, ಮಧ್ಯಾಹ್ನ 12.30 ಗಂಟೆಗೆ ತಿಪಟೂರು ಉಪನೋಂದಣಿ ಕಚೇರಿ ಹಾಗೂ ಸಂಜೆ 4 ಗಂಟೆಗೆ ಚಿಕ್ಕನಾಯಕನಹಳ್ಳಿ ಉಪನೋಂದಣಿ ಕಚೇರಿ; ಜನವರಿ 12ರಂದು ಬೆಳಿಗ್ಗೆ 11.30 ಗಂಟೆಗೆ ಶಿರಾ ಉಪನೋಂದಣಿ ಕಚೇರಿ ಮತ್ತು ಸಂಜೆ 4 ಗಂಟೆಗೆ ಪಾವಗಡ ಉಪನೋಂದಣಿ ಕಚೇರಿ; ಜನವರಿ 13ರಂದು ಬೆಳಿಗ್ಗೆ 10 ಗಂಟೆಗೆ ಕೊರಟಗೆರೆ ಉಪನೋಂದಣಿ ಕಚೇರಿ, ಮಧ್ಯಾಹ್ನ 12.30 ಗಂಟೆಗೆ ಮಧುಗಿರಿ ಉಪನೋಂದಣಿ ಕಚೇರಿ; ಜನವರಿ 14ರಂದು ಮಧ್ಯಾಹ್ನ 12 ಗಂಟೆಗೆ ತುಮಕೂರು ಉಪನೋಂದಣಿ ಕಚೇರಿ ಹಾಗೂ ಸಂಜೆ 4 ಗಂಟೆಗೆ ಗುಬ್ಬಿ ಉಪನೋಂದಣಿ ಕಚೇರಿಯಲ್ಲಿ ತರಬೇತಿಯನ್ನು ಆಯೋಜಿಸಲಾಗಿದೆ.

ಆಸಕ್ತ ಸಾರ್ವಜನಿಕರು ಭಾಗವಹಿಸಲು ಮುಕ್ತ ಅವಕಾಶವಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.11: ನಗರದಲ್ಲಿ ವಿಶ್ವಕಪ್ ವಿಜೇತೆ ಅಂಧ ಬಾಲಕಿ ದೀಪಿಕಾ ಮತ್ತು ತಂಡಕ್ಕೆ ಸನ್ಮಾನ



ತುಮಕೂರು: ಕೊಲಂಬೋದಲ್ಲಿ ನಡೆದ ಅಂಧ ಮಹಿಳೆಯರ ಟಿ–20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿ ಟಿ.ಸಿ.ದೀಪಿಕಾ ಹಾಗೂ ಅವರ ತಂಡವನ್ನು ಜನವರಿ 11 ರಂದು ತುಮಕೂರಿನಲ್ಲಿ ಸನ್ಮಾನಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘದ ಅಧ್ಯಕ್ಷ ರಾಜಣ್ಣ ತಿಳಿಸಿದರು.

ತುಮಕೂರಿನಲ್ಲಿ ರಾಜ್ಯ ಕಾಡುಗೊಲ್ಲರ ಸಂಘ ಹಾಗೂ ಜಿಲ್ಲಾ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಶಿರಾ ತಾಲ್ಲೂಕಿನ ಗಡಿ ಭಾಗದ ಒಂದು ಕುಗ್ರಾಮ ಗೊಲ್ಲರಹಟ್ಟಿಯ ಬಡ ಕುಟುಂಬದ ಆಟಗಾರ್ತಿ ವಿಶ್ವಕಪ್ ವಿಜೇತೆಯಾಗಿ ಇಡೀ ಭಾರತಕ್ಕೆ ಹೆಮ್ಮೆಯ ಸ್ಥಾನ ತಂದುಕೊಟ್ಟಿದ್ದಾರೆ. ತುಮಕೂರು ಜಿಲ್ಲೆಗೆ ಮಾತ್ರವಲ್ಲದೆ, ಕರ್ನಾಟಕಕ್ಕೆ ಇದು ಹೆಮ್ಮೆಯ ವಿಷಯ. ಬಡ ಕುಟುಂಬದ ಹೆಣ್ಣು ಮಕ್ಕಳು ಮಾಡಿರುವ ಸಾಧನೆಯನ್ನು ನಾವೆಲ್ಲ ಸ್ಮರಿಸಿಕೊಳ್ಳಬೇಕಿದೆ. ಬಡ ಕುಟುಂಬದ ಗೊಲ್ಲ ಜನಾಂಗದಲ್ಲಿ ಹುಟ್ಟಿ ವಿಶ್ವ ಮಟ್ಟದಲ್ಲಿ ಕೀರ್ತಿಪತಾಕೆ ಹಾರಿಸಿರುವ ಈಕೆ ಮತ್ತು ಇವರ ತಂಡವನ್ನು ತುಮಕೂರಿನ ಬಾಲ ಭವನದಲ್ಲಿ ಭಾನುವಾರದಂದು ಸನ್ಮಾನಿಸಲಾಗುತ್ತಿದೆ ಎಂದು ತಿಳಿಸಿದರು.

ಜ.11ರಂದು ಬೆಳಿಗ್ಗೆ 12.30ಕ್ಕೆ ಜಿಲ್ಲಾ ಬಾಲ ಭವನದಲ್ಲಿ ನಡೆಯುವ ಈ ಸನ್ಮಾನ ಕಾರ್ಯಕ್ರಮ ಹಾಗೂ ರಾಜ್ಯ ಕಾಡು ಗೊಲ್ಲರ ಸಂಘದ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು, ಗೃಹ ಸಚಿವರೂ ಆಗಿರುವ ಡಾ.ಜಿ.ಪರಮೇಶ್ವರ್, ಕೇಂದ್ರ ಸಚಿವರುಗಳಾದ ವಿ.ಸೋಮಣ್ಣ, ಹೆಚ್.ಡಿ.ಕುಮಾರಸ್ವಾಮಿ, ಲೋಕಸಭಾ ಸದಸ್ಯರಾದ ಗೋವಿಂದ ಕಾರಜೋಳ, ಮಾಜಿ ಸಚಿವರು, ಶಾಸಕರಾದ ಕೆ.ಎನ್.ರಾಜಣ್ಣ, ಜಿ.ಬಿ.ಜ್ಯೋತಿಗಣೇಶ್, ಸಿ.ಬಿ.ಸುರೇಶಬಾಬು, ಬಿ.ಸುರೇಶ್ ಗೌಡ, ವೆಂಕಟೇಶ್, ಎಂ.ಟಿ.ಕೃಷ್ಣಪ್ಪ, ಕೆ.ಷಡಕ್ಷರಿ, ಟಿ.ಬಿ.ಜಯಚಂದ್ರ, ಎಸ್.ಆರ್.ಶ್ರೀನಿವಾಸ್, ಆರ್.ರಾಜೇಂದ್ರ, ಚಿದಾನಂದಗೌಡ, ರಮೇಶಬಾಬು, ಅರಸೀಕೆರೆ ಶಿವಲಿಂಗೇಗೌಡ, ಸಮುದಾಯದ ಮುಖಂಡರಾದ ನಾಗರಾಜ ಯಾದವ್ ಸೇರಿದಂತೆ ವಿವಿಧ ಜನಪ್ರತಿನಿಧಿಗಳು ಮತ್ತು ಸಮುದಾಯದ ಮುಖಂಡರುಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ವಿವರಿಸಿದರು.

ಶಿರಾ ತಾಲ್ಲೂಕಿನ ಕರಿತಿಮ್ಮನಹಳ್ಳಿಯಲ್ಲಿ ಜನಿಸಿದ ದೀಪಿಕಾ ಅವರ ಕುಟುಂಬ ಕೂಲಿ ನಾಲಿ ಮಾಡಿ ಆಕೆಯನ್ನು ಓದಿಸಿದ್ದಾರೆ. ಕಷ್ಟಪಟ್ಟು ಓದಿ ಈ ಹಂತಕ್ಕೆ ಬೆಳೆದಿರುವುದು ಕಾಡುಗೊಲ್ಲ ಸಮುದಾಯಕ್ಕೆ ಒಂದು ಹೆಮ್ಮೆಯ ವಿಷಯ. ಈ ಸಮುದಾಯದ ಜನ ಬಡತನದಲ್ಲಿ ಬದುಕುತ್ತಿದ್ದು, ಶ್ರೀಮಂತರಾಗಿರುವವರು ತುಂಬಾ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿಯೂ ಅಂತರಾಷ್ಟ್ರಿಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ದೇಶಕ್ಕೆ ಗೌರವ ತಂದುಕೊಟ್ಟಿರುವ ತಂಡದ ಮುಖ್ಯಸ್ಥೆ ದೀಪಿಕ ಹಾಗೂ ಇತರರನ್ನು ಸನ್ಮಾನಿಸಲಾಗುತ್ತಿದೆ. ತುಮಕೂರು ತಾಲ್ಲೂಕಿನ ಕಾವ್ಯ, ಶಿವಮೊಗ್ಗದ ಕಾವ್ಯ ಅವರುಗಳು ಸಹ ಅಂದು ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ. ಇಂತಹ ಸಾಧಕರನ್ನು ಸನ್ಮಾನಿಸಿ, ಗೌರವಿಸುವುದು ಒಂದು ಹೆಮ್ಮೆಯ ಸಂಗತಿ ಎಂದರು.

ಪೂರ್ವಭಾವಿ ಸಭೆಯಲ್ಲಿ ಸಂಘದ ಪದಾಧಿಕಾರಿಗಳಾದ ಜಿ.ಡಿ.ಪ್ರಭುದೇವ್, ದೊಡ್ಡೇಗೌಡ, ಎಸ್.ಡಿ.ಬಸವರಾಜು, ತಿಪ್ಪಯ್ಯ, ಗಂಗಾಧರ್, ಚಿಕ್ಕಣ್ಣ, ರೇಣುಕಯ್ಯ, ರಾಮಣ್ಣ ಮುಂತಾದವರಿದ್ದರು.

ದೀಪಿಕಾ ಭಾರತದ ಬೆಳಕು

ಶಿರಾ ತಾಲ್ಲೂಕು ಕಾಡುಗೊಲ್ಲ ಸಮುದಾಯದ ಬಡ ಕುಟುಂಬದ ಹೆಣ್ಣು ಮಗಳು ದೀಪಿಕಾ ಅಂಧತ್ವವನ್ನು ಮೆಟ್ಟಿ ವಿಶ್ವಕಪ್ ವಿಜೇತೆಯಾಗಿದ್ದಾರೆ. ನೇಪಾಳವನ್ನು ಮಣಿಸಿ ಅಂಧ ಮಹಿಳೆಯರ ಭಾರತ ಕ್ರಿಕೆಟ್ ತಂಡ ವಿಶ್ವ ಮಟ್ಟದಲ್ಲಿ ದಾಖಲೆ ಬರೆದಿದೆ. ಈ ತಂಡದ ಮುಖ್ಯಸ್ಥರಾಗಿ ಇದೇ ಜಿಲ್ಲೆಯವರಾದ ದೀಪಿಕಾ ಇರುವುದು ಅತ್ಯಂತ ಹೆಮ್ಮೆಯ ವಿಷಯ. ಒಂದು ಕಡೆ ಅಂಧತ್ವದ ಕೊರತೆ ಮತ್ತೊಂದು ಕಡೆ ಕೂಲಿಯಿಂದ ಬದುಕುತ್ತಿದ್ದ ತಂದೆ, ತಾಯಿ ಬಡ ಕುಟುಂಬ. ಇಂತಹ ಕುಟುಂಬದಲ್ಲಿಯೂ ಸಾಧನೆ ಮಾಡಿ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವ ದೀಪಿಕಾ ಮತ್ತವರ ತಂಡವನ್ನು ಅಭಿನಂದಿಸುವುದು ನಮ್ಮೆಲ್ಲರ ಕರ್ತವ್ಯವೂ ಹೌದು.

–ಬಿ.ಬಿ.ಎಂ.ಪಿ.ರಾಜಣ್ಣ, ರಾಜ್ಯ ಕಾಡುಗೊಲ್ಲರ ಸಂಘದ ಅಧ್ಯಕ್ಷರು.

ತುಮಕೂರಿನಲ್ಲಿ ಜ.16 ರಿಂದ ಕರ್ನಾಟಕ ಕ್ರೀಡಾಕೂಟ



ತುಮಕೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ಜಿಲ್ಲಾಡಳಿತದ ವತಿಯಿಂದ ತುಮಕೂರು ಜಿಲ್ಲೆಯಲ್ಲಿ ಜನವರಿ 16 ರಿಂದ 22ರವರೆಗೆ "ಕರ್ನಾಟಕ ಕ್ರೀಡಾಕೂಟ 2025–26"ನ್ನು ಆಯೋಜಿಸಲಾಗಿದೆ.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 16ರಂದು ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಕೂಟವನ್ನು ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಗೌರ ಉಪಸ್ಥಿತರಿರುವರು.


ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ನವದೆಹಲಿಯ ಕರ್ನಾಟಕ ರಾಜ್ಯ ವಿಶೇಷ ಪ್ರತಿನಿಧಿ ಹಾಗೂ ಶಿರಾ ಶಾಸಕ ಟಿ.ಬಿ. ಜಯಚಂದ್ರ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರು ಹಾಗೂ ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್, ವಿಧಾನ ಪರಿಷತ್ ಶಾಸಕ ಹಾಗೂ ಫೀಬಾ, ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಡಾ: ಕೆ. ಗೋವಿಂದರಾಜ್ ಅವರು ಆಗಮಿಸುವರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 22ರಂದು ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿದ್ದು, ಗೌರವಾನ್ವಿತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಘನ ಉಪಸ್ಥಿತಿಯಲ್ಲಿ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ಅಧ್ಯಕ್ಷತೆ ವಹಿಸುವರು. ಕಾರ್ಯಕ್ರಮದಲ್ಲಿ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ತುಮಕೂರು ಜಿಲ್ಲೆಯ ತೆಂಗಿನಕಾಯಿ ಬೆಳೆಗಾರರಿಗೆ ಸಿಪ್ಪೆ ಸುಲಿಯುವ ಯಂತ್ರ ಒಂದು ವರದಾನ


ತೆಂಗಿನ ಕಾಯಿಯು ರಾಜ್ಯದ ಅತ್ಯಂತ ಉಪಯುಕ್ತ ಮತ್ತು ದೀರ್ಘಕಾಲಿಕ ಬೆಳೆಗಳಲ್ಲಿ ಒಂದಾಗಿದೆ. ತುಮಕೂರು ಸೇರಿದಂತೆ ರಾಜ್ಯದ ಸಾವಿರಾರು ಜನರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೆಂಗಿನಕಾಯಿ ಪ್ರಮುಖ ಪಾತ್ರ ವಹಿಸುತ್ತದೆ. ತೆಂಗಿನಕಾಯಿ ಮಾನವನಿಗೆ ಆಹಾರ, ಖಾದ್ಯ ಎಣ್ಣೆ, ಕೈಗಾರಿಕಾ ಎಣ್ಣೆ ಮತ್ತು ಆರೋಗ್ಯ ಪಾನೀಯಗಳನ್ನು ಒದಗಿಸುತ್ತದೆ ಹಾಗೂ ತೆಂಗಿನ ಮರದ ಎಲ್ಲಾ ಭಾಗಗಳು ಒಂದಲ್ಲ ಒಂದು ರೀತಿಯಲ್ಲಿ ಉಪಯುಕ್ತವಾಗಿದೆ. ತೆಂಗಿನ ಬೆಳೆ ತುಮಕೂರು ಒಳಗೊಂಡಂತೆ ಲಕ್ಷಾಂತರ ಕೃಷಿ ಕುಟುಂಬಗಳ ಸಾಮಾಜಿಕ ಆರ್ಥಿಕ ಭದ್ರತೆಯ ಮೇಲೆ ಗಾಡವಾಗಿ ಪ್ರಭಾವ ಬೀರಿದೆ. ತೆಂಗಿನ ಕಾಯಿಯನ್ನು ಸಂಸ್ಕರಿಸುವುದು ವಿಶೇಷವಾಗಿ ಕೈಯಿಂದ ಸಿಪ್ಪೆ ಸುಲಿಯುವುದು ಇನ್ನೂ ಸಮಯಬಾಧಿತ, ನಿಷ್ಪರಿಣಾಮಕಾರಿ ಮತ್ತು ಶ್ರಮದಾಯಕ ಕೆಲಸವಾಗಿಯೇ ಉಳಿದಿದೆ.

ತೆಂಗಿನ ಕಾಯಿ ಸಿಪ್ಪೆ ಸುಲಿಯುವ ಸಾಂಪ್ರದಾಯಿಕ ವಿಧಾನದಲ್ಲಿ ಹಲವು ಪ್ರಮುಖ ಸವಾಲುಗಳು ಕಾಣಿಸಿಕೊಂಡಿದೆ ಮೊದಲನೆಯದಾಗಿ, ತೆಂಗಿನ ಉದ್ಯಮದಲ್ಲಿ ಪರಿಣತಿ ಹೊಂದಿದ ಕಾರ್ಮಿಕರ ಕೊರತೆ ತೀವ್ರವಾಗಿ ಉಂಟಾಗಿದ್ದು, ಯುವ ಪೀಳಿಗೆ ಕೃಷಿ ಕಾರ್ಯಗಳಿಂದ ದೂರ ಸರಿಯುತ್ತಿರುವುದರಿಂದ ರೈತರಿಗೆ ಅಗತ್ಯ ಕಾರ್ಮಿಕರನ್ನು ಪಡೆಯುವುದು ಕಷ್ಟಕರವಾಗಿದೆ. ಕೈಯಿಂದ ಸಿಪ್ಪೆ ತೆಗೆಯುವ ಕಾರ್ಯಕ್ಕೆ ಹೆಚ್ಚಿನ ದೈಹಿಕ ಶಕ್ತಿ ಮತ್ತು ಕೌಶಲ್ಯ ಅಗತ್ಯವಿದ್ದು, ಇದರಿಂದ ಕಾರ್ಮಿಕರಲ್ಲಿ ಆಯಾಸ, ಗಾಯಗಳು ಹಾಗೂ ದೀರ್ಘಕಾಲದ ಮಸ್ಕುಲೋಅಸ್ಥಿ ಸಂಬಂಧಿತ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ; ಜೊತೆಗೆ ಚೂಪಾದ ಕಬ್ಬಿಣದ ಉಪಕರಣಗಳಿಂದ ಕೈ ಕಾಲುಗಳಿಗೆ ಗಾಯಗಳ ಅಪಾಯವೂ ಇದೆ. ಒಬ್ಬ ಕಾರ್ಮಿಕನು ಒಂದು ಗಂಟೆಯಲ್ಲಿ ಗರಿಷ್ಠ 120150 ತೆಂಗಿನ ಕಾಯಿಗಳನ್ನು ಮಾತ್ರ ಸಿಪ್ಪೆ ತೆಗೆಯಲು ಸಾಧ್ಯವಾಗುವುದರಿಂದ ಸಮಯ ಮತ್ತು ಶ್ರಮ ವ್ಯಯ ಹೆಚ್ಚಾಗಿ, ಒಟ್ಟು ಉತ್ಪಾದಕತೆ ಕುಸಿಯುತ್ತದೆ. ಅಲ್ಲದೆ, ಈ ಪ್ರಕ್ರಿಯೆ ಸಂಪೂರ್ಣವಾಗಿ ಕಾರ್ಮಿಕರ ಕೌಶಲ್ಯ ಮತ್ತು ಅನುಭವದ ಮೇಲೆ ಅವಲಂಬಿತವಾಗಿರುವುದರಿಂದ ಸಿಪ್ಪೆ ತೆಗೆಯುವ ಗುಣಮಟ್ಟದಲ್ಲಿ ಅಸ್ಥಿರತೆ ಕಂಡುಬಂದು, ಸಂಸ್ಕರಣಾ ದಕ್ಷತೆ ಹಾಗೂ ಅಂತಿಮ ಉತ್ಪನ್ನದ ಮಾರುಕಟ್ಟೆ ಮೌಲ್ಯಕ್ಕೆ ಹಾನಿ ಉಂಟಾಗುತ್ತದೆ.





ತೆಂಗಿನ ಕಾಯಿ ಸಿಪ್ಪೆ ಸುಲಿಯುವ ಯಂತ್ರಗಳು ಸಾಂಪ್ರದಾಯಿಕ ವಿಧಾನದಲ್ಲಿ ಎದುರಾಗುವ ಕಾರ್ಮಿಕ ಕೊರತೆ, ಹೆಚ್ಚು ಶ್ರಮ, ಸಮಯ ವ್ಯಯ ಮತ್ತು ಗುಣಮಟ್ಟದ ಅಸ್ಥಿರತೆಗಳಿಗೆ ಸಮಗ್ರ ಪರಿಹಾರವನ್ನು ಒದಗಿಸುತ್ತವೆ. ಯಂತ್ರೋಪಯೋಗದಿಂದ ಒಂದು ಗಂಟೆಗೆ ಸುಮಾರು 9001000 ತೆಂಗಿನ ಕಾಯಿಗಳ ಸಿಪ್ಪೆ ತೆಗೆಯಲು ಸಾಧ್ಯವಾಗುತ್ತಿದ್ದು, ಇದು ಕೈಯಿಂದ ಮಾಡುವ ವಿಧಾನಕ್ಕಿಂತ 68 ಪಟ್ಟು ಹೆಚ್ಚು ವೇಗ ಮತ್ತು ದಕ್ಷತೆಯನ್ನು ನೀಡುತ್ತದೆ; ಇದರಿಂದ ಕಾರ್ಮಿಕರ ಮೇಲಿನ ಅವಲಂಬನೆ ಕಡಿಮೆಯಾಗುವುದರ ಜೊತೆಗೆ ನಿರಂತರ ಪೂರೈಕೆ ಸಾಧ್ಯವಾಗುತ್ತದೆ. ನಿಯಂತ್ರಿತ ಯಾಂತ್ರಿಕ ವ್ಯವಸ್ಥೆಯಿಂದ ಕಾರ್ಯಕ್ಷೇತ್ರದ ಸುರಕ್ಷತೆ ಹೆಚ್ಚಾಗಿ, ಗಾಯಗಳು ಮತ್ತು ಅಪಘಾತಗಳ ಪ್ರಮಾಣದಲ್ಲಿ ಸ್ಪಷ್ಟ ಕುಸಿತ ಕಂಡುಬರುತ್ತದೆ. ಯಂತ್ರಗಳ ಮೂಲಕ ಸಿಪ್ಪೆ ಸಮಾನವಾಗಿ ತೆಗೆಯಲ್ಪಡುವುದರಿಂದ ಉತ್ಪನ್ನದ ಗುಣಮಟ್ಟ ಏಕರೂಪವಾಗಿದ್ದು, ಸಂಸ್ಕರಣಾ ದಕ್ಷತೆ ಹಾಗೂ ಮಾರುಕಟ್ಟೆ ಮೌಲ್ಯ ಸ್ಥಿರವಾಗಿರುತ್ತದೆ. ತೆಂಗಿನ ಸಿಪ್ಪೆ ಸುಲಿಯುವ ಗುಣಮಟ್ಟದ ಯಂತ್ರದ ಪ್ರಾರಂಭಿಕ ವೆಚ್ಚ ಸುಮಾರು ರೂ. 2,00,000 ಆಗಿದ್ದು, ಇದಕ್ಕೆ 3–ಫೇಸ್ ವಿದ್ಯುತ್ ಸಂಪರ್ಕ ಅಗತ್ಯವಿರುತ್ತದೆ; ಆದರೂ ದೀರ್ಘಾವಧಿಯಲ್ಲಿ ಕಾರ್ಮಿಕ ವೆಚ್ಚ, ಸಮಯ ಮತ್ತು ಶ್ರಮದ ಉಳಿತಾಯದಿಂದ ಗಮನಾರ್ಹ ಆರ್ಥಿಕ ಲಾಭ ದೊರೆಯುತ್ತದೆ. ರೈತರ ಗುಂಪು ಅಥವಾ ಸಹಕಾರಿ ಮಾದರಿಯಲ್ಲಿ ಬಳಕೆ ಮಾಡಿದರೆ ಹೂಡಿಕೆ ಭಾರ ಕಡಿಮೆಯಾಗುವುದರ ಜೊತೆಗೆ, ಈ ಯಂತ್ರವನ್ನು ಬಾಡಿಗೆಗೆ ನೀಡುವ ಮೂಲಕ ಹೆಚ್ಚುವರಿ ಆದಾಯವನ್ನೂ ಗಳಿಸುವ ಅವಕಾಶವೂ ಇದೆ. ಹೆಚ್ಚಿನ ಮಾಹಿತಿಗಾಗಿ ಕೆವಿಕೆ ಕೊನೇಹಳ್ಳಿಯ ಮುಖ್ಯಸ್ಥರಾದ ಡಾ. ಶಂಕರ ಮೊ: 6362970923 ಹಾಗೂ ಕೆವಿಕೆ ವಿಜ್ಞಾನಿ ಡಾ. ದರ್ಶನ್ ಅವರನ್ನು ಸಂಪರ್ಕಿಸಬಹುದು



EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.